ಸುಶೀಲಾ ಪ್ರಕಾಶನದ ಹನ್ನೆರಡನೇ ಪುಷ್ಪ

॥ ಶ್ರೀ ಮೂಲರಾಮೋ ವಿಜಯತೇ ॥

ಯತಿಕುಲಚಕ್ರವರ್ತಿ ತಪೋವೈರಾಗ್ಯಮೂರ್ತಿ
ಶ್ರೀ ಸತ್ಯಧರ್ಮತೀರ್ಥರು



ಶ್ರೀ ಸತ್ಯಧರ್ಮತೀರ್ಥರ ವೃಂದಾವನ, ಹೊಳೆಹೊನ್ನೂರು, ಶಿವಮೊಗ್ಗ ಜಿಲ್ಲೆ

ಲೇಖಕರು : ಎಸ್.ಕೆ. ಬದರೀನಾಥ್

ಸುಶೀಲಾ ಪ್ರಕಾಶನ

52-1 (71-1), ಗಾಂಧೀಬಜಾರ್, ಬೆಂಗಳೂರು-560 004. ✆ : 26674242



ಹೊಳೆನರಸೀಪುರದುತ್ತರಾದಿ ಮಠದಲ್ಲಿ ಶ್ರೀ ಸತ್ಯಧರ್ಮತೀರ್ಥಪ್ರತಿಷ್ಠಿತ
ಶ್ರೀ ಪ್ರಾಣದೇವರ ಬಳಿ ಶ್ರೀ ಸತ್ಯಾತ್ಮತೀರ್ಥರು

ಮುನ್ನುಡಿ

|| ಶ್ರೀಃ ||

ಹಂಸನಾಮಕ ಪರಮಾತ್ಮನಿಂದ ಆರಂಭವಾದ ಉತ್ತರಾದಿ ಮಠದ ವಿಜಯಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸಿದ ಯತಿಪುಂಗವರ ಸಾಲಿನಲ್ಲಿ ಮೇಲಾಗಿರುವ, ಮೂಲರಾಮನನ್ನು ರತ್ನದಲ್ಲಿ ರಂಜಿಸಿದ ಗಂಗೆಯನು ಮೂರ್ತಿಮತ್ತಾಗಿ ಕಂಡ **ಮಹಾಮಹಿಮೋಪೇತರು ಶ್ರೀ ಸತ್ಯಧರ್ಮತೀರ್ಥರು.**

ಸತ್ಯನಿಧಿಗಳಿಂದ ಅನುಗ್ರಹಿತವಾದ ನವರತ್ನವಂಶದಲ್ಲಿ ಹೊಸರತ್ನದಂತೆ ಹುಟ್ಟಿದ ಪುರುಷೋತ್ತಮಾಚಾರ್ಯರು ಸತ್ಯಬೋಧರ ಗರಡಿಯಲ್ಲಿ ಪಳಗಿ ಸತ್ಯವರರಿಗೆ ರಾಮನನ್ನು ತಂದೊಪ್ಪಿಸಿ ಅವರಿಂದ **ಸನ್ಯಾಸ ದೀಕ್ಷೆಯನ್ನು ಪಡೆದು ಶ್ರೀ ಸತ್ಯಧರ್ಮತೀರ್ಥರಾದರು.**

ಇವರಲ್ಲಿಯ ಪಾಂಡಿತ್ಯ ಪೂರ್ಣ (ತುಂಬಿದ) ಕಳಶ ಎನ್ನುವುದಕ್ಕೆ ಇವರು ಬರೆದ ಶ್ರೀಮದ್ಭಾಗವತ ವ್ಯಾಖ್ಯಾನವೇ ಸಾಕ್ಷಿ. ಇನ್ನೂ ಅನೇಕ ಕ್ಷೇತ್ರಗಳಲ್ಲಿ ತಮ್ಮ ಸ್ಥಾನವನ್ನು ಯಾರಿಗೂ ಸಿಗದಂತೆ ಮಾಡಿದ್ದಾರೆ. ಇಂತಹ ಮಹಾಮಹಿಮೋಪೇತ ರಾದ ಸತ್ಯಧರ್ಮತೀರ್ಥರ ಜೀವನಚರಿತ್ರೆಯನ್ನು ತಿಳಿಯುವುದೇ ನಮ್ಮ ಜೀವನದ ಧನ್ಯತೆ. ಈಗಾಗಲೇ ಅವರ ಜೀವನ ಚರಿತ್ರೆಯನ್ನು ತಿಳಿಸುವ ಅನೇಕ ಕೃತಿಗಳು ಬಂದಿವೆ. ಈ ವರ್ಷದ ಆರಾಧನೆಯ ಸಂದರ್ಭದಲ್ಲಿ **ಶ್ರೀಮಾನ್ ಶ್ರೀ ಎಸ್.ಕೆ. ಬದರೀನಾಥ್** ಅವರು ಸತ್ಯಧರ್ಮತೀರ್ಥರ ವಿಶೇಷ ಮಹಿಮೆಯನ್ನು ಒಳಗೊಂಡ ಪುಸ್ತಕವನ್ನು ಹೊರತರುತ್ತಿರುವುದು ಬಹಳ ಸಂತೋಷದ ಸಂಗತಿ. ಶ್ರೀಮಾನ್ ಬದರೀನಾಥ್ ಅವರು ಈಗಾಗಲೇ ಸತ್ಯವರರು, ಸತ್ಯಪರಾಯಣರು ಇವರೇ ಮೊದಲಾದ ಯತಿಶ್ರೇಷ್ಠರ ಜೀವನಚರಿತ್ರೆಯನ್ನು ಬರೆದು ಪ್ರಕಟಗೊಳಿಸಿದ್ದಾರೆ. **ಅಂತಹ ಅವರಿಗೂ ಅವರ ಪತ್ನಿಗೂ ಸತ್ಯಧರ್ಮತೀರ್ಥಗುರ್ವಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಸೀತಾಪತಿ ಶ್ರೀಮೂಲರಾಮಚಂದ್ರನು ಅನುಗ್ರಹಿಸಲಿ.**

ಶ್ರೀ ಸತ್ಯಧ್ಯಾನಾಚಾರ್ಯಕಟ್ಟಿ

|| ಶ್ರೀಮೂಲರಾಮೋ ವಿಜಯತೇ ||

ಅರಿಕೆ

ಈ ಹೊತ್ತಿಗೆಯು **ಶ್ರೀ ಸತ್ಯಧರ್ಮತೀರ್ಥರ** ಅನುಗ್ರಹ, **ಶ್ರೀಮೂಲಸೀತಾರಾಮರ ದಯೆಯಿಂದಲೇ ಬರೆದಿದ್ದು. ಶ್ರೀ ರಘೋತ್ತಮತೀರ್ಥರ** ಆರಾಧನಾ ಕಾಲದಲ್ಲಿ ಬೆಂಗಳೂರಿನಲ್ಲಿ ಅವರ ವೃಂದಾವನದೆದುರು ಒಬ್ಬ ಅಪರಿಚಿತರು ತಾವು ಶ್ರೀ ಸತ್ಯಧರ್ಮರ ವಂಶಸ್ಥರೆಂದು ಹಾಗೂ ಅವರಿಗೆ ಶ್ರೀ ಸತ್ಯಧರ್ಮರ ಮೇಲೆ ಒಂದು ಸಣ್ಣ ಹೊತ್ತಿಗೆಯನ್ನು ಬರೆದುಕೊಡಬೇಕೆಂದರು. ತಕ್ಷಣವೇ, ಬರೆದು ಸಿದ್ಧ ಮಾಡಿಟ್ಟಿದ್ದರೂ ಆ ವ್ಯಕ್ತಿ ಪುನಃ ಸಿಗಲಿಲ್ಲ. ಇದನ್ನು ಶ್ರೀಮನ್ನ್ಯಾಯಸುಧಾ ಪಾಠಕ್ಕೆ ಬರುವ **ಶ್ರೀ ಪಿ.ಎಸ್.ಹರಿರಾವ್**ರಲ್ಲಿ ಪ್ರಸ್ತಾಪಿಸಲು, ತಾವು ಅದನ್ನು ಮುದ್ರಿಸಲು ತಗಲುವ ಖರ್ಚನ್ನು ಭರಿಸುವುದಾಗಿ ಹೇಳಿದರು. ಅಲ್ಲದೇ, ಈ ವಿಷಯವನ್ನು ಗೋಪ್ಯವಾಗಿಡಬೇಕೆಂದರು. ಹಾಗೆ ಹೇಳುವುದು ಅವರ ದೊಡ್ಡ ಗುಣ. ಆದರೆ, ಮಾಡಿದ ಸಹಾಯ ವನ್ನು ಹೇಳಬೇಕಾದ್ದು ಕರ್ತವ್ಯ. ಶ್ರೀ ಸತ್ಯಧರ್ಮರೇ ಪ್ರೇರೇಪಣೆ ಮಾಡಿ ಬರೆಸಿ, ಮುದ್ರಿಸಿ, ಪ್ರಕಾಶನಗೊಳಿಸಿರುವರೆಂದರೆ ಏನೇನೂ ಅತಿಶಯೋಕ್ತಿಯಲ್ಲ. ಈ ಬರವಣಿಗೆಯನ್ನು ಪ್ರಕಾಶಕರು ಬರೆಯಲು ಉಪಯೋಗಿಸಿಕೊಂಡ ಪುಸ್ತಕ ಬರಹಗಾರರಿಗೆ ವಂದನೆಗಳು.

ನನ್ನ ವಿದ್ಯಾಗುರುಗಳೂ ಪ್ರಕಾಂಡಪಂಡಿತರೂ ವಿದ್ವನ್ ಶಿರೋಮಣಿಗಳೂ ಆದ **ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿಯವರು** ನನ್ನ ಮನವಿಗೆ ಓಗೊಟ್ಟು ಮುನ್ನುಡಿ ಯನ್ನು ದಯಪಾಲಿಸಿದ್ದಾರೆ. ಅವರಿಗೆ ಚಿರಋಣಿ.

ನನ್ನ ಮಾತಾಪಿತೃಗಳಾದ ಶ್ರೀಮತಿ ನಾಗಮ್ಮ (ಸುಶೀಲಾಬಾಯಿ) ಹಾಗೂ ಸದರಮಿನ್ ಬಿ. ಕೃಷ್ಣಮೂರ್ತಿಯವರಿಗೆ ನನ್ನ ನಮನಗಳು. ನನಗೆ ಸಲಹೆ ಹಾಗೂ ಸಹಕಾರವನ್ನು ನೀಡಿದ ನನ್ನ ಧರ್ಮಪತ್ನಿ ಸುಮನಾ ಬದರೀನಾಥಳಿಗೆ ಶ್ರೀ ಸೀತಾರಾಮನು ಕೃಪೆ ಮಾಡಲಿ.

ಈ ಹೊತ್ತಿಗೆಯನ್ನು ಚಿಕ್ಕ ವಯಸ್ಸಿನಲ್ಲಿಯೇ ಶ್ರೀಸೀತಾರಾಮಚಂದ್ರನ ಪಾದವನ್ನು ಸೇರಿದ ನನ್ನ ತಂಗಿ ಚಿ॥ ಸೌಭಾಗ್ಯವತಿ ವಿದ್ಯಾಳಿಗೆ ಅರ್ಪಿಸಿರುವೆನು.

ಶ್ರೀ ಸತ್ಯಪರಾಯಣರ ನಂಬಿರೋ
ಶ್ರೀ ಸೀತಾರಾಮರ ಅನುಗ್ರಹ ಹೊಂದಿರೋ

ಸ್ಥಳ : ಬೆಂಗಳೂರು
ದಿನಾಂಕ : 21.8.2006

ಎಸ್.ಕೆ. ಬದರೀನಾಥ್
(ಸದರಮಿನ್)

ಯತಿಕುಲ ಚಕ್ರವರ್ತಿ ತಪೋವೈರಾಗ್ಯಮೂರ್ತಿ ಶ್ರೀ ಸತ್ಯಧರ್ಮತೀರ್ಥರು

''ಸಾಕ್ಷಾತ್ ಶ್ರೀ ಹರಿವಾಯುಗಳಿಂದ ಅಧಿಷ್ಠಿತವಾದ, ದೇವದೇವತೆ, ಮುನಿ ಋಷಿಗಳಿಂದ ಪ್ರವರ್ತಿತವಾದ, ವೈಷ್ಣವ ಸಿದ್ಧಾಂತ ಪ್ರಚಾರವನ್ನು ಯುಗಯುಗದಿಂದ ಮಾಡುತ್ತ ಬಂದ **ಶ್ರೀ ಉತ್ತರಾದಿ ಮಠದ ಶ್ರೀ ಸತ್ಯಬೋಧರಲ್ಲಿ** ಸಮಗ್ರ ಶಾಸ್ತ್ರಗಳನ್ನು ತಿಳಿದು ಅವರಿಂದಲೇ ಸನ್ಯಾಸ ಪಡೆದು, ಅವರ ಉತ್ತರಾಧಿಕಾರಿಗಳಾಗಿ, ಅವರಿಂದ ಆಯುಷ್ಯವನ್ನು ಪಡೆದು, ಉತ್ತಮೋತ್ತಮ ಪಂಡಿತರಾದ ಗುರುವರೇಣ್ಯರು **ಶ್ರೀ ಸತ್ಯಸಂಧತೀರ್ಥರು,** ಮಹಾತಪಸ್ವಿಗಳು ಗಂಗೆಯನ್ನು ಸಾಕ್ಷಾತ್ ಕಂಡು, ಅವಳ ಕೈಯಲ್ಲಿಯೇ ಸುವರ್ಣದ ಮರದ ಬಾಗಿನ ನೀಡಿದವರು ಗಯಾ ವಿಷ್ಣುಪಾದ ಮಂದಿರದ ಬೀಗವನ್ನು ದೃಷ್ಟಿಯಿಂದಲೇ ಮುರಿದರು. ವಿಠಲ ವೃದ್ಧ ಬ್ರಾಹ್ಮಣನಾಗಿ ಬಂದು ಇವರಿಂದ ಮುದ್ರಾಧಾರಣೆ ಮಾಡಿಸಿಕೊಂಡ, ಸಾರ್ವಕಾಲಿಕ ಮಠದ ಪಂಚ ಮುದ್ರಾಧಿಕಾರ ತಿಳಿಸಿದವನು. ಮುದ್ರಾಧಾರಣೆ ಮಹಾಮಹಿಮೆ ತಿಳಿಸಿದನು. ಉಡುಪಿಯ ಕೃಷ್ಣನನ್ನು ಮುಟ್ಟಿ ಪೂಜಿಸಿದರು. ಕೋಟಿ ತುಳಸಿ ಅರ್ಪಿಸಿದರು. ಅಷ್ಟಸಿದ್ಧಿಯನ್ನು ಪಡೆದ ಪ್ರಸಿದ್ಧ ಪುರುಷರು (**ಶ್ರೀ ಸತ್ಯಾತ್ಮತೀರ್ಥರು** – ಅನುಗ್ರಹ ಸಂದೇಶ, ಶ್ರೀ ಸತ್ಯ ಸತ್ಯಸಂಧ ವಿಜಯ) ಇಂತಹ ಗುರುಗಳ ಶಿಷ್ಯರಾದ ಶ್ರೀ ಸತ್ಯವರರ ಶಿಷ್ಯರು ಹಾಗೂ ಶ್ರೀ ಸತ್ಯಬೋಧ ಗುರುಗಳಲ್ಲಿ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ಸಹಪಾಠಿ ಯಾಗಿದ್ದವರು **ಶ್ರೀ ಸತ್ಯಧರ್ಮತೀರ್ಥರು.**

ಮಹಿಮಾನ್ವಿತರಾದ ಶ್ರೀ ಸತ್ಯಸಂಧರ ಶಿಷ್ಯರಾದ ಪ್ರಾತಃಸ್ಮರಣೀಯರಾದ ಶ್ರೀ ಸತ್ಯವರರ ವರಕುಮಾರರೇ ಶ್ರೀ ಸತ್ಯಧರ್ಮತೀರ್ಥರು. ಜ್ಞಾನವೈರಾಗ್ಯಸಿಂಧುಗಳಾದ ಶ್ರೀ ಸತ್ಯವರತೀರ್ಥರ ಬಗ್ಗೆ ಪಂಡಿತೋತ್ತಮರಾದ ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿಯವರು ಬರೆದಿರುವ ಮುನ್ನುಡಿಯಲ್ಲಿ ಶ್ರೀ ಸತ್ಯಧರ್ಮರ ಬಗ್ಗೆ ಈ ರೀತಿ ಬರೆದಿದ್ದಾರೆ;

ಶ್ರೀ ಸತ್ಯವರತೀರ್ಥರ ಸಾಕ್ಷಾತ್ ಶಿಷ್ಯರೇ ಶ್ರೀ ಸತ್ಯಧರ್ಮತೀರ್ಥ ಶ್ರೀಪಾದಂಗಳವರು, ಶ್ರೀ ಸತ್ಯಧರ್ಮತೀರ್ಥರ ಪಾಂಡಿತ್ಯ, ಗ್ರಂಥಗಳು ಜಗತ್ಪ್ರಸಿದ್ಧವಾದವುಗಳು. ಶ್ರೀ ಸತ್ಯಧರ್ಮತೀರ್ಥರು ತಮ್ಮ ಒಂದು ಗ್ರಂಥದ ಕೊನೆಯಲ್ಲಿ ಹೀಗೆ ಹೇಳುತ್ತಾರೆ–

''ಈ ಗ್ರಂಥವನ್ನು ನಾನು ರಚನೆ ಮಾಡಿಲ್ಲ. ಅಕ್ಷರಾಭ್ಯಾಸ ಮಾಡಿಸುವಾಗ ತಂದೆಯು ಮಗನಿಂದ ಹೇಗೆ ಬರೆಯಿಸಬೇಕೋ ಹಾಗೇ ನಮ್ಮ ಗುರುಗಳಾದ ಸತ್ಯವರತೀರ್ಥರು ನಮ್ಮಿಂದ ಬರೆಸಿದ್ದಾರೆ''.

ಪಂಡಿತ ಪಾಮರರಿಂದ ವಂದಿತರಾದ ರುದ್ರಾಂಶಸಂಭೂತರಾದ (ಸತ್ಕಥಾ

ಪುಟ) ಶ್ರೀ ಸತ್ಯಧರ್ಮರು ತಾವು ಬರೆದ ಗ್ರಂಥಗಳು ತಮ್ಮ ಗುರುಗಳಾದ ಶ್ರೀ ಸತ್ಯವರರ ಅನುಗ್ರಹದಿಂದ ಎಂದು ಬರೆದಿದ್ದಾರೆ. ಅವರಿಗೆ ಅವರ ಗುರುಗಳಲ್ಲಿದ್ದ ಗೌರವಶ್ರದ್ಧಾಭಕ್ತಿಗಳು ಎದ್ದು ತೋರುತ್ತದೆ.

ಆಶ್ರಮಪೂರ್ವದಲ್ಲಿ ಶ್ರೀ ಸತ್ಯಧರ್ಮತೀರ್ಥರ ಹೆಸರು ಶ್ರೀ ನವರತ್ನ ಅಣ್ಣಯ್ಯಾಚಾರ್ಯರೆಂದು ಹಾಗೂ ಇವರ ತಂದೆಯ ಹೆಸರು ನವರತ್ನ ಮುದ್ಗಲಾಚಾರ್ಯರೆಂದು. ಇವರು ಇವರ ತಂದೆಯ ನಾಲ್ಕು ಜನ ಗಂಡು ಮಕ್ಕಳಲ್ಲಿ ಮೊದಲನೇಯವರಾಗಿದ್ದರು. ಇವರು ತುಂಬಾ ಬಡಕುಟುಂಬದಲ್ಲಿ ಜನಿಸಿ ಬಹಳಷ್ಟು ಕಡು ಬಡತನವನ್ನುಂಡವರು. ಒಂದು ಸಾರಿ ಇವರ ಮನೆಗೆ ಒಬ್ಬ ಸ್ಮಾರ್ತ ಬ್ರಾಹ್ಮಣನು ವಿಭೂತಿಯನ್ನು ಧರಿಸಿ ನೋಡುವರ ಕಣ್ಣಿಗೆ ತೇಜಃಪುಂಜವಾಗಿದ್ದು, ಭವ್ಯವಾಗಿದ್ದು ಮಧ್ಯಾಹ್ನ ಊಟದ ಸಮಯದಲ್ಲಿ ಬಂದು ತಾನು ಈ ದಿನದ ಊಟವನ್ನು ನಿಮ್ಮಲ್ಲಿಯೇ ಮಾಡುವೆನೆಂದು ಹೇಳಿದನು. ಆ ದಿನ ಅಣ್ಣಯ್ಯಾಚಾರ್ಯರಿಗೆ ಸರಿಹೋಗುವಷ್ಟೇ ಆಹಾರವಿತ್ತು ಇದನ್ನು ಆ ಬ್ರಾಹ್ಮಣನಿಗೆ ಹೇಳಲು ತಾನು ಊಟ ಮಾಡಿಯೇ ಹೋಗುವೆನೆಂದು ಹೇಳಿ ಊಟ ಮಾಡಿಕೊಂಡು ಹೋದನು. ಆಚಾರ್ಯರಿಗೆ ಅವನಲ್ಲಿ ಸಂದೇಹ ಬರಲು ಅವನನ್ನು ಅನುಸರಿಸಿ ಹೋಗಲು ಆ ಬ್ರಾಹ್ಮಣನು ಆ ಊರಿನ ಮುಂದೆ ಇದ್ದ ಈಶ್ವರನ ದೇವಸ್ಥಾನದಲ್ಲಿ ಹೊಕ್ಕಿದ್ದನ್ನು ಕಂಡರು. ದೇವಸ್ಥಾನದ ಬಾಗಿಲು ತೆರೆದು ನೋಡಲು ಅವನು ಕಣ್ಮರೆಯಾಗಿದ್ದನು. ಆಚಾರ್ಯರು ಸಾಕ್ಷಾತ್ ರುದ್ರದೇವರೇ ಬಂದು ತಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಹೋದರೆಂದು ತಿಳಿದರು. ಮುಂದೆ ಇವರು ಆಶ್ರಮವಾಸಿಗಳಾದ ಮೇಲೆ ಇಂಥಹದೇ ಒಂದು ಘಟನೆ ನಡೆಯಿತು. ಶ್ರೀ ಅಣ್ಣಯ್ಯಾಚಾರ್ಯರು ತಮ್ಮ ವಿದ್ಯಾಭ್ಯಾಸವನ್ನು ತಮ್ಮ ಸ್ವಸ್ಥಳದಲ್ಲಿ ತಮ್ಮ ತಂದೆಯಲ್ಲಿಯೇ ಪ್ರಾರಂಭಿಸಿದರೆಂದು ತೋರುತ್ತದೆ. ತರುವಾಯ ಆಗ್ಯೆ ಮಹಾಮಹಿಮರೆಂದೇ ಲೋಕವಿಖ್ಯಾತರಾಗಿದ್ದ ಶ್ರೀ ಮೂಲಸಂಸ್ಥಾನ ಶ್ರೀಮದುತ್ತರಾದಿ ಮಠ ಪೀಠಾಲಂಕೃತರಾಗಿದ್ದ ಶ್ರೀ ಸತ್ಯಬೋಧರಲ್ಲಿ ತಮ್ಮ ವಿಶೇಷ ವ್ಯಾಸಂಗವನ್ನು ಮುಂದುವರೆಸಿದರು. ಶ್ರೀ ಸತ್ಯಬೋಧರಲ್ಲಿ ಶ್ರೀ ನವರತ್ನ ಅಣ್ಣಯ್ಯಾಚಾರ್ಯರು ವ್ಯಾಸಂಗ ಮಾಡುವ ಕಾಲದಲ್ಲಿ ಇವರ ಜೊತೆ ಶ್ರೀ ಹಾವೇರಿ ರಾಮಚಂದ್ರಾಚಾರ್ಯರು, ಶ್ರೀ ಹಾವೇರಿ ಕೃಷ್ಣಾಚಾರ್ಯರು ಹಾಗೂ ಶ್ರೀ ಅಣ್ಣಯ್ಯಾಚಾರ್ಯರ ತಮ್ಮಂದಿರಾದ ಶ್ರೀ ಶ್ರೀನಿವಾಸಾಚಾರ್ಯರು ಸಹ ವ್ಯಾಸಂಗ ಮಾಡುತ್ತಿದ್ದರು. ವಿಶೇಷವೇನೆಂದರೆ ಈ ನಾಲ್ಕು ಜನರು ಒಬ್ಬರ ತರುವಾಯ ಒಬ್ಬರು ಮೂಲ ಸಂಸ್ಥಾನವಾದ ಶ್ರೀಮದುತ್ತರಾದಿ ಮಠದ ಪೀಠವನ್ನಲಂಕರಿಸಿದ್ದು, ಶ್ರೀ ರಾಮಚಂದ್ರಾಚಾರ್ಯರು, ತಮ್ಮ ವಿದ್ಯಾಗುರುಗಳಾದ ಶ್ರೀ ಸತ್ಯಬೋಧರಿಂದ ಆಶ್ರಮವನ್ನು ಸ್ವೀಕರಿಸಿ ಶ್ರೀ ಸತ್ಯಸಂಧರೆನಿಸಿ ಮಠದ ಕೀರ್ತಿಯನ್ನುತ್ತುಂಗಕ್ಕೆ ಏರಿಸಿದರು. ಇವರ ಶಿಷ್ಯರೇ ಶ್ರೀ ಹಾವೇರಿ ಕೃಷ್ಣಾಚಾರ್ಯರು, ಶ್ರೀ ಸತ್ಯವರರೆಂದು ಪ್ರಸಿದ್ಧರಾದವರು. ಇವರ ವರಕುಮಾರರೇ ಶ್ರೀ

ನವರತ್ನ ಅಣ್ಣಯ್ಯಾಚಾರ್ಯರು ಶ್ರೀ ಸತ್ಯಧರ್ಮನಾಮಾಂಕಿತರು. ಇವರ ಕರಕಮಲ ಸಂಜಾತರೇ ಶ್ರೀ ನವರತ್ನ ಶ್ರೀನಿವಾಸಾಚಾರ್ಯರು, ಶ್ರೀ ಸತ್ಯಸಂಕಲ್ಪರೆಂದು ಖ್ಯಾತಿ ಗೊಂಡವರು. ಈ ನಾಲ್ಕು ಜನರಿಗೂ ವ್ಯಾಸ ಹಾಗೂ ದಾಸಸಾಹಿತ್ಯಕ್ಕೆ ಬೆನ್ನೆಲುಬಾಗಿದ್ದ ಶ್ರೀ ಸತ್ಯಬೋಧ ಗುರುಗಳ ಅನುಗ್ರಹ ಹಾಗೂ ಆಶೀರ್ವಾದದಿಂದ ಶ್ರೀ ಮೂಲರಾಮ ಸೀತಾ ದೇವಿಯ ಪೂಜೆ ಮಾಡುವ ಸುಯೋಗ ಹಾಗೂ ಶ್ರೀಮದಾನಂದತೀರ್ಥರು ಅಲಂಕರಿಸಿ ಕಂಗೊಳಿಸಿದ ಪೀಠವನ್ನೇರುವ ಯೋಗ ದೊರಕಿತೆಂದರೆ ಅತಿಶಯೋಕ್ತಿಯೇನಲ್ಲ.

ಶ್ರೀ ಸತ್ಯಧರ್ಮರು ವಿದ್ಯೆಗೂ ಪಾಂಡಿತ್ಯಕ್ಕೂ ಪ್ರಖ್ಯಾತವಾದ 'ನವರತ್ನ' ವಂಶದಲ್ಲಿ ಜನಿತರು. ಶ್ರೀ ಬಾಳಾಚಾರ್ಯಕೃತ **ನವರತ್ನವಂಶಜ ರತ್ನಮಾಲಿಕಾ ಮತ್ತು ಗುರುಚಂದ್ರ ಕಲೋದಯದಲ್ಲಿ** ನವರತ್ನ ವಂಶದ ಉಲ್ಲೇಖನವಿದೆ. ಶ್ರೀಮದುತ್ತರಾದಿ ಮಠದ ಪರಂಪರೆಯಲ್ಲಿ ಹದಿನೆಂಟನೆಯ ಯತಿಗಳಾದ ಜ್ಞಾನವೈರಾಗ್ಯ ತಪೋನಿಧಿ ಗಳಾದ, **ಶ್ರೀ ಸತ್ಯನಾಮಪ್ರವರ್ತಕರಾದ, ಸಶರೀರ ವೃಂದಾವನಸ್ಥರಾದ** ಹಾಗೂ ಸ್ವವಂಶೀಯರಾದ ಶ್ರೀ ಸತ್ಯಸಂಧತೀರ್ಥರ ಶ್ರೀ ಮೂಲರಾಮ ಪೂಜೆಗೆ ಹಾಗೂ ನ್ಯಾಯಸುಧಾ ಪಾಠಪ್ರವಚನಕ್ಕೆ ಮೆಚ್ಚಿ ಶಿರಃಕಂಪನದಿಂದ ದೊಡ್ಡದಾದ ವೃಂದಾವನವು ಚಲಿಸುವಂತೆ ಮಾಡಿದ **ಶ್ರೀ ಸತ್ಯವ್ರತತೀರ್ಥರ** ವರಕುಮಾರರಾದ **ಶ್ರೀ ಸತ್ಯನಿಧಿ ತೀರ್ಥರು** ಬಿಜಾಪುರದಲ್ಲಿ ತಮ್ಮ ಪ್ರಥಮ ಚಾತುರ್ಮಾಸವನ್ನು ಅಲ್ಲಿಯ ರಾಘವ ಪಂಡಿತನ ಸತ್ಕಾರದಲ್ಲಿ ಕೈಗೊಂಡರು. ಆ ಸಮಯದಲ್ಲಿ ನಡೆದ ವಾಕ್ಯಾರ್ಥಗಳಲ್ಲಿ ವಿದ್ವನ್ಮಣಿಗಳು, ಪಂಡಿತರು, ಪಾಮರರು ಭಾಗವಹಿಸಿದ್ದರು. ಆ ವಿದ್ವದ್ಗೋಷ್ಠಿಯಲ್ಲಿ ವಿದ್ವಾಂಸರು, ಪಂಡಿತರು ಆದ ಶ್ರೀ ಮುದ್ಗಲಾಚಾರ್ಯರು ತಮ್ಮ ಆರು ಜನ ಪುತ್ರ ರೊಂದಿಗೆ ಹಾಗೂ ಸೋದರಳಿಯನೊಂದಿಗೆ ಭಾಗವಹಿಸಿ ವಾಕ್ಯಾರ್ಥ ಮಾಡಿ ಎಲ್ಲರ ಪ್ರಶ್ನೆಗಳಿಗೆ ಸದುತ್ತರವನ್ನಿತ್ತು ನಿರುತ್ತರಗೊಳಿಸಿ ಜಯಶೀಲರಾಗಿ ತಮ್ಮ ವಿನೀತ, ವಿಧೇಯತೆಯಿಂದ ಶ್ರೀಗಳವರನ್ನು ಪ್ರಸನ್ನಗೊಳಿಸಿಕೊಂಡರು. ಇವರ ವಿದ್ವತ್ ಪ್ರೌಢಿಮೆ ಯನ್ನು ಮೆಚ್ಚಿ ಶ್ರೀಗಳವರು ಅವರುಗಳಿಗೆ **'ನವರತ್ನ'**ವೆಂಬ ನಾಮಧೇಯವನ್ನು ದಯ ಪಾಲಿಸಿದರು. ಅಂದಿನಿಂದ ಅವರ ವಂಶಕ್ಕೆ 'ನವರತ್ನ'ವೆಂದು ರೂಢಿಯಾಯಿತು. ಈ ವಂಶದಲ್ಲಿ ಹುಟ್ಟಿದವರು ಶ್ರೀ ನವರತ್ನ ಅಣ್ಣಯ್ಯಾಚಾರ್ಯರು (ಪುರುಷೋತ್ತಮಾಚಾರ್ಯರು) ಹಾಗೂ ಶ್ರೀ ನವರತ್ನ ಶ್ರೀನಿವಾಸಾಚಾರ್ಯರು. ಶ್ರೀ ಸತ್ಯನಿಧಿಗಳು, ಶ್ರೀ ರಾಘವೇಂದ್ರ ಸ್ವಾಮಿಗಳು ಸಮಕಾಲೀನರು ಹಾಗೂ ಇವರಿಬ್ಬರು ಕುಂಭಕೋಣದಲ್ಲಿ ಭೇಟಿ ಯಾಗಿದ್ದರೆಂದು ಪ್ರತೀತಿ.

ಶ್ರೀ ಸತ್ಯಧರ್ಮರ ಬಗ್ಗೆ ಬರೆಯುವಾಗ ಶ್ರೀ ಸಿ.ಆರ್. ರಾವ್ ತಮ್ಮ "Srimat Uttaradi Mutt"ದಲ್ಲಿ ಈ ರೀತಿ ಬರೆದಿದ್ದಾರೆ.

"He was a facile writer and has written tippani on parts

of Bhagavata, Tattvasankhyana, Tattva Nirnaya and others. He was a devotee par excellence".

ಶ್ರೀ ಸತ್ಯಧರ್ಮತೀರ್ಥರು ಚತುರ್‌ಶಾಸ್ತ್ರ ಪಂಡಿತರು. ತರ್ಕ, ವ್ಯಾಕರಣ, ವೇದಾಂತ, ಅಲಂಕಾರ, ಸಾಹಿತ್ಯಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಹೊಂದಿದ್ದರು. ಒಳ್ಳೆ ವಾಕ್ಪಟುತ್ವ ಚತುರರಾಗಿದ್ದರು. ಒಳ್ಳೆ ಜ್ಞಾನಿಗಳು ಹಾಗೂ ಶಾಪಾನುಗ್ರಹಶಕ್ತರಾಗಿದ್ದರು.

ಮಹಾಸ್ವಾಮಿಗಳು ಸುಮಾರು 33 ವರ್ಷಗಳಷ್ಟು ಸುದೀರ್ಘ ಕಾಲ ಸಂಸ್ಥಾನಾಧಿಪತ್ಯವನ್ನು ಮಾಡಿದರು. ದ್ವೈತ ಮತ ದುಂಧುಬಿಯನ್ನು ದೇಶಾದ್ಯಂತ ಮೊಳಗಿಸಿದರು. ಆಶ್ರಮಪೂರ್ವದಲ್ಲಿ ಸಂಸಾರಸಮೇತ ಶ್ರೀಮಠದಲ್ಲಿದ್ದು ಪಾಠ ಪ್ರವಚನ ಮಾಡುತ್ತಿದ್ದರು. ಈ ಸಮಯದಲ್ಲಿ ಭಾಗವತ ಸಾರೋದ್ಧಾರವನ್ನು ಬರೆದ ಶ್ರೀ ವಿಷ್ಣುತೀರ್ಥರು, ಶ್ರೀ ಆದ್ಯರಾಮಾಚಾರ್ಯರು, ಶ್ರೀ ಉಮ್ಮರ್ಜಿ ಲಕ್ಷ್ಮಣಾಚಾರ್ಯರು, ಶ್ರೀ ಕರದೀಪಾಚಾರ್ಯರುಗಳು ಸಹ ಆಸ್ಥಾನಪಂಡಿತರಾಗಿದ್ದರು. ವಿದ್ಯಾಪಕ್ಷಪಾತಿಗಳೂ ವಿದ್ವಾಂಸರಿಗೆ ಆಶ್ರಿತರೂ ಆಗಿದ್ದು ಸ್ವತಃ ವಿದ್ಯಾಗ್ರೇಸರರು, ಪ್ರಕಾಂಡ ಪಂಡಿತರೂ ಆಗಿದ್ದ ಶ್ರೀ ಸತ್ಯವರರು ಶ್ರೀಪೀಠವನ್ನಲಂಕರಿಸಿದ್ದರು.

ಶ್ರೀ ಸತ್ಯವರತೀರ್ಥರು ನ್ಯಾಮಗೊಂಡಲು ಗ್ರಾಮದಲ್ಲಿರುವಾಗ ಅವರಿಗೆ ಉತ್ತರಭಾರತ ಪ್ರವಾಸ ಮಾಡಬೇಕೆಂದು ಉತ್ಕಟೇಚ್ಛೆಯುಂಟಾಗಿ ಪ್ರಯಾಣಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಮೈಸೂರು ಸಂಸ್ಥಾನದ ದಿವಾನರೂ, ಶ್ರೀಮಠದ ಶಿಷ್ಯರೂ, ಹಿತೈಷಿಗಳೂ, ಸ್ವಾಮಿಗಳ ಪರಮಭಕ್ತರಾದ ಪೂರ್ಣಯ್ಯನವರು ಶ್ರೀ ತೀರ್ಥಶ್ರೀನಿವಾಸಾಚಾರ್ಯರನ್ನು, ಶ್ರೀ ಸಂಜೀವ ಕೃಷ್ಣಾಚಾರ್ಯರನ್ನು, ಶ್ರೀ ಹರಿದಾಸಾಚಾರ್ಯರನ್ನು ಹಾಗೂ ಶ್ರೀ ತಾಮ್ರಪರ್ಣಿ ಆಚಾರ್ಯರನ್ನು ಶ್ರೀಗಳಲ್ಲಿ ಕಳುಹಿಸಿ ದೇಶದಲ್ಲಿ ಕೋಮುದಳ್ಳುರಿ ತಾಂಡವವಾಡುತ್ತಿರುವುದರಿಂದ ಉತ್ತರಭಾರತ ಪ್ರವಾಸ ಮಾಡುವುದು ಸರಿಯಲ್ಲ. ಮತ್ತು ಆಂತರಿಕ ಕಲಹಗಳು, ಸೈನಿಕ ಕಾರ್ಯಾಚರಣೆಗಳು ನಡೆಯುತ್ತಿರುವುದರಿಂದ ರಾಜಕೀಯ ಪರಿಸ್ಥಿತಿ ಹದಗೆಟ್ಟಿರುವುದರಿಂದ ಶ್ರೀಗಳು ಕೈಗೊಂಡಿರುವ ಪ್ರವಾಸ ಸಾಧುವಲ್ಲ. ಅದನ್ನು ಕೈಬಿಡುವುದು ಒಳ್ಳೆಯದೆಂದು ಹೇಳಿ ಕಳುಹಿಸಿದರು. ಈ ನಾಲ್ಕು ಜನ ಆಚಾರ್ಯರು ಪೂರ್ಣಯ್ಯನವರು ಹೇಳಿದ್ದನ್ನು ಸ್ವಾಮಿಗಳಿಗೆ ಮನದಟ್ಟು ಮಾಡಿ, ಅವರು ಕೈಗೊಂಡ ಯಾತ್ರೆಯನ್ನು ಬಿಡಲು ಯಶಸ್ವಿಯಾದರು. ಶ್ರೀಗಳವರು ನ್ಯಾಮಗೊಡಲಿನಲ್ಲಿ ವಾಸಿಸತೊಡಗಿದರು.

ನ್ಯಾಮಗೊಂಡಲು ಗೌರಿಬಿದನೂರಿಗೆ ಹತ್ತಿರವಾಗಿದ್ದು ಅಲ್ಲಿಯ ಜನರು ಆಗ ಅಷ್ಟು ಸ್ಥಿತಿವಂತರಾಗಿರಲಿಲ್ಲ. ಸುತ್ತಮುತ್ತವಿದ್ದ ಪೆನುಗೊಂಡೆ, ಪಾಮುದುರ್ತಿ ಹಿಂದೂಪುರವು ಸಾಮಾನ್ಯವಾಗಿ ಕಲ್ಲುಗುಡ್ಡೆಗಳಿಂದ ಕೂಡಿದ್ದಾಗಿತ್ತು. ಶ್ರೀಮಠದಲ್ಲಿ ಆಗ್ಗೆ ಶ್ರೀಸತ್ಯಬೋಧರ ಕಾಲದಲ್ಲಿ ಆಪದ್ಧನವೆಂದು ಇಟ್ಟಿದ್ದ ಇಪ್ಪತ್ತೈದು ತಪ್ಪಲೆಗಳ

ವರಹಗಳು, ಶ್ರೀವೇದವ್ಯಾಸ ನವರತ್ನಖಚಿತ ಸಂಪುಟ ಮತ್ತು ಮುತ್ತುರತ್ನಖಚಿತ ಶ್ರೀರಾಮದೇವರ ಬಾಣಬಿಲ್ಲು, ಪೀಠಪಾದುಕೆ, ಆಸನಗಳು ಇದ್ದವು. ಆಗ, ಆ ಪ್ರದೇಶದಲ್ಲಿದ್ದ ಕಳ್ಳಕಾಕರ ದೃಷ್ಟಿ ಶ್ರೀಮಠದ ಸಂಪತ್ತಿನ ಮೇಲೆ ಕೇಂದ್ರೀಕೃತವಾಗಿತ್ತು. ಇಂತಹ, ಅನರ್ಘ್ಯ ವಸ್ತುಗಳನ್ನು ಅಪಹರಿಸಲು ಕಾಯುತ್ತಲಿದ್ದರು. ಪಿಂಗಳನಾಮ ಸಂವತ್ಸರದ ಆಷಾಢ ಶುದ್ಧ ಸಪ್ತಮಿಯಂದು ಶ್ರೀ ಸತ್ಯವರತೀರ್ಥರು ಸಂಸ್ಥಾನದ ಪೂಜೆಯನ್ನು ಬಹು ವಿಜೃಂಭಣೆಯಿಂದ ಮಾಡಿ ಭಕ್ತಜನಸಮೂಹಕ್ಕೆ ತಪ್ತಮುದ್ರಾ ಧಾರಣೆ, ಗಂಧ, ಪ್ರಸಾದ, ಮಂತ್ರಾಕ್ಷತೆಗಳನ್ನು ನೀಡಿ, ದೇವ ಬ್ರಾಹ್ಮಣರ ವಿಶ್ವಾಸ ಗಳಿಸಿದ್ದ ಪಾಮದುರ್ತಿ ಗೋವಿಂದರೆಡ್ಡಿಯನ್ನು ಗೌರವಿಸಿದರು. ಶುದ್ಧ ಚತುರ್ದಶಿ ರಾತ್ರಿಯ ಪೂರ್ಣಿಮಾ ಬೆಳಗಿನ ಜಾವ ಶ್ರೀಗಳವರು ಅಲ್ಪಾಚಮನಕ್ಕೆ ಹೋಗಿದ್ದಾಗ ಚೋರನೊಬ್ಬನು ಮಣೆಯ ಮೇಲಿಟ್ಟಿದ್ದ ಶ್ರೀರಾಮದೇವರ ಪೆಟ್ಟಿಗೆಯನ್ನೆತ್ತಿಕೊಂಡು ಅದರ ಸ್ಥಳದಲ್ಲಿ ಬುಟ್ಟಿಯನೊಂದನ್ನು ಬೋರಲು ಹಾಕಿ ವಸ್ತ್ರವನ್ನು ಹೊದ್ದಿಸಿ ಕದ್ದೊಯ್ದನು. ಪ್ರಾತಃಕಾಲ ಶ್ರೀಗಳವರು ಶ್ರೀರಾಮದೇವರು ಕಳುವಾಗಿರುವುದನ್ನು ಕಂಡು ಎಲ್ಲಾ ಸ್ಥಳವನ್ನು ಹುಡುಕಿಸಿದರು. ದಿವ್ಯಮೂರ್ತಿಗಳಾದ ಶ್ರೀ ಸೀತಾದೇವಿ ಮೂಲರಾಮರ ವಿಗ್ರಹವು ಮರಳಿ ಸಿಗುವವರೆಗೂ ನಿರಾಹಾರ ದೀಕ್ಷೆಯನ್ನು ಕೈಗೊಳ್ಳುವುದಾಗಿ ನಿರ್ಧರಿಸಿ ಶ್ರೀ ಮೂಲರಾಮ ಹಾಗೂ ಶ್ರೀ ಸೀತಾದೇವಿಯರನ್ನು ಸತತವಾಗಿ 21 ದಿನಗಳು ತದೇಕ ಧ್ಯಾನ ಮಾಡಿದರು. ಈ ವಿಷಯ ತಿಳಿದ ಪೂರ್ಣಯ್ಯನವರು ಖುದ್ದಾಗಿ ಬಂದು ಸ್ವಲ್ಪ ಆಹಾರವನ್ನು ತೆಗೆದುಕೊಳ್ಳಲು ಮನವೊಲಿಸಲು ಪ್ರಯತ್ನ ಪಟ್ಟರು. ಶ್ರೀಗಳವರು ಪೂಜೆ ಮಾಡಿದ ನಂತರ ತೆಗೆದುಕೊಳ್ಳುವ ತೀರ್ಥವಲ್ಲದೇ ಮತ್ತೇನೂ ತೆಗೆದುಕೊಳ್ಳಲೊಪ್ಪಲಿಲ್ಲ. ಇಪ್ಪತ್ತೊಂದನೆಯ ದಿನ ಬೆಳಗಿನ ಜಾವದಲ್ಲಿ ಒಂದು ಬಾಳೆಎಲೆ ಮೇಲೆ ಶ್ರೀ ಮೂಲರಾಮ ಹಾಗೂ ಶ್ರೀ ಸೀತಾದೇವಿಯರ ವಿಗ್ರಹಗಳನ್ನು ಮಲಗಿಸಿ ಮತ್ತೊಂದೆಲೆಯಿಂದ ಹೊದ್ದಿಸಿ ಅಲ್ಲಿಯೇ ಇದ್ದ ರಾಗಿಯ ಹುಲ್ಲಿನ ಬಣವೆಯ ಪಕ್ಕದ ಕಲ್ಯಾಣಿ ಬಳಿ ಇಟ್ಟು ಕಣ್ಮರೆಯಾಗಿದ್ದನು. ಶ್ರೀಗಳವರ ತಪೋಜ್ವಾಲೆ ವಿಗ್ರಹಗಳನ್ನು ಕಳುವು ಮಾಡಿದವನನ್ನು ಸುಟ್ಟು ಸುಣ್ಣ ಮಾಡಿರಬೇಕು. ಇದೇ ಸಮಯದಲ್ಲಿ ವಿಗ್ರಹಾನ್ವೇಷಣೆಗೋಸ್ಕರ ಬಂದಿದ್ದ ಆಸ್ಥಾನ ಪಂಡಿತರಾದ ಶ್ರೀ ನವರತ್ನ ಅಣ್ಣಯ್ಯಾಚಾರ್ಯರು ಮೋರೆಯನ್ನು ತೊಳೆಯಲು ಹೋಗಿದ್ದವರು ಅಕಸ್ಮಾತ್ತಾಗಿ ಬಾಳೆಎಲೆಯಲ್ಲಿರಿಸಿದ್ದ ವಿಗ್ರಹಗಳನ್ನು ಕಂಡು ತಕ್ಷಣವೇ ಶ್ರೀಗಳವರಿಗೆ ತಿಳಿಸಿದರು. ಭಕ್ತಿಪರವಶರಾಗಿ ಆನಂದೋದ್ರೇಕದಿಂದ ಕೂಡಿದ ಶ್ರೀಗಳವರು 21 ದಿವಸಗಳ ಉಪವಾಸದ ಬಳಲಿಕೆ, ಸುಸ್ತುಗಳನ್ನು ಲೆಕ್ಕಿಸದೇ ಓಡೋಡಿ ಬಂದು ಶ್ರೀಮೂಲರಾಮ ಸೀತಾದೇವಿಯ ವಿಗ್ರಹಗಳನ್ನು ಕಣ್ಣಿಗೊತ್ತಿಕೊಂಡು ವಾದ್ಯವೈಭವ ದೊಡನೆ ಪಲ್ಲಕ್ಕಿಯಲ್ಲಿ ಕರೆತಂದರು. ಪೂರ್ಣಯ್ಯನವರು ಸಹ ಈ ಮಹಾಭಾಗ್ಯದಲ್ಲಿ ಭಾಗಿಯಾಗಿದ್ದರು. ಆಗ ಶ್ರೀಗಳವರ ದೇಹಸ್ಥಿತಿಯನ್ನು ಗಮನಿಸಿದ ಪೂರ್ಣಯ್ಯ

ನವರು ಉತ್ತರಾಧಿಕಾರಿ ನೇಮಕ ಮಾಡುವ ಬಗ್ಗೆ ಶ್ರೀಗಳವರಲ್ಲಿ ಅರಿಕೆ ಮಾಡಿಕೊಂಡರು.

ಶ್ರೀ ಸತ್ಯವರರು ಶ್ರೀಮೂಲರಾಮ ಹಾಗೂ ಶ್ರೀಸೀತಾದೇವಿ ವಿಗ್ರಹಗಳನ್ನು ಮರಳಿ ತಂದಿತ್ತವರೂ, ಆಶ್ರಮಪೂರ್ವದಲ್ಲಿ ತಮ್ಮ ಪರಮಗುರುಗಳಾದ ಶ್ರೀ ಸತ್ಯಬೋಧರಲ್ಲಿ ತಮ್ಮ ಜೊತೆ ವ್ಯಾಸಂಗ ಮಾಡುತ್ತಲಿದ್ದ ಶ್ರೀ ನವರತ್ನ ಅಣ್ಣಯ್ಯಾಚಾರ್ಯರೇ ಯೋಗ್ಯರೆಂದು ನಿರ್ಧರಿಸಿ, ಶ್ರೀ ಸತ್ಯಧರ್ಮರೆಂದು ಕರೆದು ತುರೀಯಾಶ್ರಮವನ್ನು ಶ್ರಾವಣ ಶುದ್ಧ ಪಂಚಮಿಯಂದು ನೀಡಿದರು. ಶ್ರಾವಣ ಶುದ್ಧ ಸಪ್ತಮಿಯೇ ತಮ್ಮ ಸ್ವಗ್ರಾಮವಾದ ಸಂತೇಬಿದನೂರಿನಲ್ಲಿ ವೃಂದಾವನಸ್ಥರಾದರು. ಶ್ರೀ ಸತ್ಯಧರ್ಮರು ತಮ್ಮ ಗುರುಗಳ ವೃಂದಾವನವನ್ನು ದಿವಾನ್ ಪೂರ್ಣಯ್ಯನವರ ಸಹಕಾರ ಹಾಗೂ ಸಹಾಯದಿಂದ ಸಂತೇಬಿದನೂರಿನಲ್ಲಿ ಸ್ಥಾಪಿಸಿ, ಭವ್ಯವಾದ ಮಠವನ್ನು ಕಟ್ಟಿಸಿದರು. ವೃಂದಾವನವು ಜನಮೇಜಯ ಪ್ರತಿಷ್ಠಿತವಾದ ಮುಖ್ಯಪ್ರಾಣನ ಗುಡಿ ಮುಂಭಾಗ ದಲ್ಲಿದೆ. ಶ್ರೀ ಸಂತೇಬಿದನೂರು ಮೈತ್ರೇಯರ ವಾಸಸ್ಥಳವಾಗಿದ್ದು ಉತ್ತರ ಪಿನಾಕಿ ನದಿ ದಡದ ಮೇಲಿದೆ.

ಶ್ರೀ ಸತ್ಯಧರ್ಮರು ತಮ್ಮ ಗುರುಗಳಾದ ಶ್ರೀ ಸತ್ಯವರರ ವೃಂದಾವನ ಸಂತೇಬಿದನೂರಿನಲ್ಲಿ ಸ್ಥಾಪಿಸಿ ಅಲ್ಲಿ ಭವ್ಯವಾದ ಮಠವನ್ನು ಶ್ರೀ ಪೂರ್ಣಯ್ಯನವರ ನೆರವಿನಿಂದ ಕಟ್ಟಿಸಿದರು. ಅವರ ಸಮಾರಾಧನೆಯನ್ನು ಬಹಳ ವೈಭವದಿಂದ ನೆರವೇರಿಸಿದರು. ಶ್ರೀಮೂಲರಾಮ ದೇವರ ಹಾಗೂ ಶ್ರೀಮೂಲಸೀತಾದೇವಿಯರ ವಿಗ್ರಹಗಳನ್ನು ಹುಡುಕಲು ಬಹಳಷ್ಟು ಶ್ರಮ ವಹಿಸಿದ್ದ ಶ್ರೀ ಕೋದಂಡಪಾಣಿ ರಂಗಾಚಾರ್ಯರಿಗೆ ಒಂದು ನಿರೂಪವನ್ನು ಮಠದ ವತಿಯಿಂದ ಹೊರಡಿಸಿ ಅವರ ನೆರವನ್ನು ಸ್ಮರಿಸಿ **''ವ್ಯಾಸಪೂರ್ಣಪ್ರಿಯ''** ಎಂಬ ಬಿರುದನ್ನು ಹಾಗೂ ತಿರುಮಲಾಪೂರ ಗ್ರಾಮವನ್ನು ದಾನವಾಗಿ ಕೊಟ್ಟರು. ಅಲ್ಲದೇ, ಶ್ರೀಪಾದಪುತ್ರರಾದ ಶ್ರೀ ಸ್ವಾಮಿರಾಯಚಾರ್ಯರಿಗೆ ಹಲವು ಗ್ರಾಮಗಳನ್ನು ಕೊಟ್ಟು ಸಂತಸಗೊಳಿಸಿದರು. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ ಪೂರ್ಣಯ್ಯನವರು ಶ್ರೀಗಳವರಿಗೆ ಶ್ರದ್ಧಾಭಕ್ತಿಗಳಿಂದ ತಮ್ಮ ಶಕ್ತಿಗೆ ಮೀರಿ ಸಹಕರಿಸಿದುದಲ್ಲದೇ, ಸುಮಾರು ಹತ್ತಿರ ದಲ್ಲಿರುವ ಲೇಪಾಕ್ಷಿಯಿಂದ ಕೆತ್ತಿದ ಕಲ್ಲಿನ ಕಂಬಗಳನ್ನು ತರಿಸಿ ಮಠವನ್ನು ಪೂರ್ಣ ಗೊಳಿಸಲು ಅನುವು ಮಾಡಿಕೊಟ್ಟರು.

ಶ್ರೀ ಪೂರ್ಣಯ್ಯನವರ ಭಕ್ತಿಶ್ರದ್ಧೆಗಳು ಮಠದ ಮೇಲೆ ಅಪಾರವಾಗಿದ್ದು ತಮ್ಮದೇ ಆದ ಸಂತೇಬಿದನೂರಿನಲ್ಲಿದ್ದ ತಮ್ಮ ಅಣ್ಣನ ಮಗನಾದ ಹಿರಣ್ಯಪ್ಪನು ವಾಸಿಸುತ್ತಿದ್ದ ಮನೆಯನ್ನು ಶ್ರೀ ಸತ್ಯವರರಿಗೆ ಮನಃಪೂರ್ವಕವಾಗಿ ದಾನ ಮಾಡಿದ್ದರು. ಅವರ ಪಕ್ಕದಲ್ಲಿಯೇ ಈಗ ಶ್ರೀ ಸತ್ಯಪರಾಯಣರ ಮಠವಿದ್ದು ಅದಕ್ಕೆ ಹೊಂದಿ ಕೊಂಡಿರುವಂತೆ ಇರುವ ಶ್ರೀ ಸತ್ಯಧರ್ಮರಿಂದ ಕಟ್ಟಿಸಿದ ಭವ್ಯವಾದ ಶ್ರೀ ಸತ್ಯವರರ

ವೃಂದಾವನ ಹಾಗೂ ಮಠವಿದೆ. ಶ್ರೀ ಪೂರ್ಣಯ್ಯನವರು ಬಹು ಸರಳ ಜೀವಿಗಳು, ಮೇಧಾವಿಗಳು, ಕಾರ್ಯತತ್ಪರರು, ಚಾಣಾಕ್ಷರಾಗಿದ್ದರು. 'ಕಸ್ತೂರಿ' ಮಾಸಪತ್ರಿಕೆಯ 'ಪುಸ್ತಕ ವಿಭಾಗ'ದ 'ದಿವಾನ್ ಪೂರ್ಣಯ್ಯನವರು'ನಲ್ಲಿ ಶ್ರೀ ಬಿ.ಎಸ್. ರಾಮಭಟ್ಟ ರವರು 131ನೇ ಪುಟದಲ್ಲಿ ''ಪೂರ್ಣಯ್ಯನವರ ವ್ಯಕ್ತಿತ್ವ''ದ ಬಗ್ಗೆ ಈ ರೀತಿ ಬರೆದಿರುತ್ತಾರೆ –

''ತಮ್ಮ ಖಾಸಗಿ ಜೀವನದಲ್ಲಿ ಪೂರ್ಣಯ್ಯನವರು ತುಂಬಾ ಸರಳ ಜೀವಿಗಳು. **ಅವರ ಬದುಕು ಪುಸ್ತಕದ ತೆರೆದ ಪುಟಗಳಿದ್ದಂತೆ.** ತುಂಬಾ ಗೌರವಾನ್ವಿತ ವ್ಯಕ್ತಿ. ಕುಳ್ಳಗೆ ಸ್ವಲ್ಪ ಸ್ಥೂಲ ಶರೀರ. ತುಂಬಾ ಲಕ್ಷಣವಾಗಿದ್ದರು....... **ವೈಷ್ಣವರಾಗಿ ಮಧ್ವಾಚಾರ್ಯರ ಗ್ರಂಥಗಳನ್ನು ಓದಿಕೊಂಡಿದ್ದರು.** ಹಾಗೆಯೇ ಯುದ್ಧತಂತ್ರಗಳನ್ನು ಬಲ್ಲ ಹಾಗೂ ಯೋಧರೂ ಆಗಿದ್ದರು. **ಚತುರ ಶಿಲ್ಪಿ** ಎಂಬ ಹೆಸರನ್ನು ಗಳಿಸಿದ್ದರು. ಸಂಸ್ಕೃತ ಮತ್ತು ಪಾರಸಿ ಭಾಷೆಯಲ್ಲಿ ಪಂಡಿತರಾಗಿದ್ದರು''.

ಶ್ರೀಮಠದ ಶಿಷ್ಯರಾದ ದಿವಾನ್ ಪೂರ್ಣಯ್ಯನವರು ಮಠದ ಏಳಿಗೆಗೆ ಬಹಳಷ್ಟು ಶ್ರಮಿಸಿದರೆಂದರೆ ಅತಿಶಯೋಕ್ತಿಯೇನಾಗಲಾರದು.

ಶ್ರೀ ಸತ್ಯಧರ್ಮರು ತಮ್ಮ ಗುರುಗಳ ಮಠವನ್ನು ಕಟ್ಟಿಸಿ, ಸಮಾರಾಧನೆಯನ್ನು ಮುಗಿಸಿಕೊಂಡು ತಮ್ಮ ಪರಮಗುರುಗಳು ಹಾಗೂ ವಿದ್ಯಾಗುರುಗಳಾದ ಶ್ರೀ ಸತ್ಯಬೋಧರ ವೃಂದಾವನವಿರುವ ಸವಣೂರಿಗೆ ಹೊರಟರು. ದಾರಿಯುದ್ದಕ್ಕೂ ಮಠದ ಶಿಷ್ಯರಿಗೆ ತಪ್ತಮುದ್ರಾಧಾರಣೆ ಹಾಗೂ ಶ್ರೀಮೂಲರಾಮ ಸೀತಾದೇವಿಯರ ಪೂಜೆಯನ್ನು ಮಾಡಿ ಅವರನ್ನು ಪುನೀತರಾಗಿ ಮಾಡಿದರು. ಅಲ್ಲಿ ಪರಮಗುರು ಗಳಾದ ಶ್ರೀ ಸತ್ಯಬೋಧರ ವೃಂದಾವನಕ್ಕೆ ಪೂಜೆ ಮಾಡಿ ಮುಂದೆ ಭಾಗ್ಯನಗರ ವೆಂದೇ ಹೆಸರಾದ ಹೈದರಾಬಾದಿಗೆ ಬಂದರು. ಸಂಚಾರದಲ್ಲಿ ತಮ್ಮ ಜೊತೆಗೆ ಇದ್ದ ಆಶ್ರಮಪೂರ್ವದ ಮಕ್ಕಳಾದ ಶ್ರೀ ಬೋಧರಾಯಾಚಾರ್ಯರಿಗೆ ಪಾಠವನ್ನು ಹೇಳುತ್ತಲಿದ್ದರು. ಅಲ್ಲಿ ಶ್ರೀ ರಾಜಾನಾರಾಯಣನು ಶ್ರೀಮಠದ ಖ್ಯಾತಿಯನ್ನು ಹಾಗೂ ಶ್ರೀಗಳವರ ಮಹಿಮಾವನ್ನು ಅಲ್ಲಿಯ ನವಾಬನಿಗೆ ತಿಳಿಸಿ, ಬಹುವಾದಮನ್ನಣೆಯನ್ನು ಮಾಡಿಸಿದನು. ಅಲ್ಲಿ ಚಾತುರ್ಮಾಸಕ್ಕೆ ಶ್ರೀಗಳವರು ನಿಂತು, ಮಠವನ್ನು ಕಟ್ಟಿಸಿ, ಭಕ್ತಸಮೂಹಕ್ಕೆ ಮಂತ್ರೋಪದೇಶ, ಮುದ್ರಾಧಾರಣೆ ಮಾಡಿದರು. ಅವರ ಮಹಿಮಾ ಸಾಮರ್ಥ್ಯವನ್ನು ಮನಗಂಡು ಮಠದ ಶಿಷ್ಯರಲ್ಲದ ಕೆಲವರು ಶ್ರೀಮಠದ ಶಿಷ್ಯ ರಾದರು. ಹೈದರಾಬಾದಿನಿಂದ ಗೌತಮಿ ದಂಡೆಯ ಮೇಲಿರುವ ರಾಜಮಹೇಂದ್ರಿಗೆ ಸಂಸ್ಥಾನವು ಬಿಜಯ ಮಾಡಿತು. ಶ್ರೀಗಳವರಿಗೆ ಆದರ, ಅಭಿಮಾನಗಳ ಭವ್ಯ ಸ್ವಾಗತ ದೊರೆಯಿತು. ಅಲ್ಲಿ ಕೆಲವು ಕಾಲವಿದ್ದು ಅಲ್ಲಿಂದ ಗೋದಾವರೀ ತೀರದಲ್ಲಿದ್ದ ಧಾರ್ಮಿಕ ಕ್ಷೇತ್ರಗಳಿಗೆ ಬಿಜಯ ಮಾಡಿದರು. ಅಲ್ಲಿ ಅವರ ವರ್ಚಸ್ಸು, ಪಾಂಡಿತ್ಯ,

ಪ್ರತಿಭೆಯನ್ನು ಕಂಡು ಮನಃಪರಿವರ್ತನೆಗೊಂಡು ಹಲವರು ಅವರಿಂದ ತಪ್ತಮುದ್ರಾಧಾರಣೆ ಮಾಡಿಸಿಕೊಂಡು ಅವರ ಶಿಷ್ಯರಾದರು. ಆಗ ವಿಜಯನಗರದರಸನು ಇವರ ಮಹಿಮಾವಿಶೇಷವನ್ನು ತಿಳಿದು ಇವರಿದ್ದಲ್ಲಿಗೆ ಬಂದನು. ಪಾರುಪತ್ಯ ಆಚಾರ್ಯಪ್ಪಾಚಾರ್ಯರು ಹಾಗೂ ಕಲ್ಲಾಪುರ ರಾಮಚಂದ್ರಾಚಾರ್ಯರು ಶ್ರೀಗಳವರ ಹಾಗೂ ಮಠದ ಮಹಿಮೆಯನ್ನು ತಿಳಿಯ ಹೇಳಿದರು. ಆಗ ಮಹಾರಾಜನು ಶ್ರೀಗಳವರನ್ನು ಕಂಡು ಅವರಿಂದ ಆಶೀರ್ವಚನ ಪಡೆದು ತನ್ನ ರಾಜ್ಯಕ್ಕೆ ಬರಬೇಕೆಂದು ಬೇಡಿಕೊಂಡರು. ಶ್ರೀಗಳವರು ರಾಜನ ಆಹ್ವಾನವನ್ನು ಮನ್ನಿಸಿ ಸಂಸ್ಥಾನಸಮೇತ ಹೋಗಿ ಒಂದು ತಿಂಗಳವರೆವಿಗೂ ರಾಜನ ಆಧಿಪತ್ಯವನ್ನು ಸ್ವೀಕರಿಸಿ, ದಿನಂಪ್ರತಿ ಮೂಲರಾಮ ಸೀತಾದೇವಿಯರ ಪೂಜೆಯನ್ನು ಮಾಡಿ ರಾಜನಿಗೆ ಮಂಗಳವನ್ನುಂಟು ಮಾಡಿದರು. ಅವನ ಆನಂದಕ್ಕೆ ಮೇರೆಯೇ ಇಲ್ಲದೆ, ಶ್ರೀಗಳವರಿಗೆ ಶ್ರೀರಾಮಸೀತಾದೇವಿಯರಿಗೆ ಹಾಕಲು ಮುತ್ತಿನ ಕಂಠಿ, ನವರತ್ನಖಚಿತವಾದ ಪೀಠ, ಪ್ರಭಾವಳಿ, ಆಭರಣಗಳನ್ನು ನೀಡಿದನು. ಆಗ ಶ್ರೀಗಳವರಲ್ಲಿ ಸುಮಾರು ಅರ್ಧಸಹಸ್ರ ಜನರು ಅವರ ಶಿಷ್ಯರಾಗಬಯಸಲು ಅವರಿಗೆ ತಪ್ತಮುದ್ರಾಧಾರಣೆ ಮಾಡಿ ಮಠದ ಶಿಷ್ಯರನ್ನಾಗಿ ಮಾಡಿಕೊಂಡರು.

ಶ್ರೀ ಸತ್ಯಧರ್ಮತೀರ್ಥರು ಅಲ್ಲಿಂದ ಪಂಢರಾಪುರಕ್ಕೆ ಬಂದರು. ಅವರ ಗುರುಗಳಾದ ಶ್ರೀ ಸತ್ಯವರರಿಗೆ ಗುರುಗಳಾದ **ಶ್ರೀ ಸತ್ಯಸಂಧರಿಂದ ಸಾಕ್ಷಾತ್ತಾಗಿ ಮುದ್ರಾಧಾರಣೆ** ಮಾಡಿಸಿಕೊಂಡು ಮುದ್ರಾಧಾರಣೆಯ ಮಹತ್ವವನ್ನು ಪ್ರದರ್ಶಿಸಿದ **ಪಾಂಡುರಂಗ ದೇವರು** ಹಾಗೂ **ರುಕುಮಾಯಿಯನ್ನು** ಅಲ್ಲಿ ಸೇವಿಸಿದರು. ಪಂಢರಾಪುರದಲ್ಲಿಯೂ ಸಹ, ಬಹಳಷ್ಟು ಜನ ಅವರ ಶಿಷ್ಯರಾದರು. ಪಾಂಡುರಂಗನ ಮಂದಿರವು ಚಂದ್ರಭಾಗ ನದಿಯ ದಡದ ಮೇಲಿದೆ. ಶ್ರೀಮದುತ್ತರಾದಿ ಮಠವು ನದಿಯ ದಂಡೆಯ ಮೇಲೆ ಪಾಂಡುರಂಗ ವಿಠಲನ ಮಂದಿರಕ್ಕೆ ಹತ್ತಿರದಲ್ಲಿದೆ. ಇಲ್ಲಿ ಶ್ರೀ ವೇದನಿಧಿತೀರ್ಥರ ಹಾಗೂ ಅಭಿನವ ಆನಂದತೀರ್ಥರೆಂದೇ ಪ್ರಖ್ಯಾತರಾಗಿರುವ ಶ್ರೀ ಸತ್ಯಧ್ಯಾನತೀರ್ಥರ ವೃಂದಾವನಗಳಿವೆ. ಅಲ್ಲಿಂದ ಶ್ರೀಮಠವು ಪುಣೆಗೆ ಬರುವಲ್ಲಿ ಶ್ರೀಗಳವರ ಮಹಿಮಾತಿಶಯವನ್ನು ತಿಳಿದಿದ್ದ ಶ್ರೀ ಬಾಜೀರಾಯನು ತನ್ನ ಮಂತ್ರಿಯಾದ ಘೋರಪಡೆಯನ್ನು ಶ್ರೀಗಳಲ್ಲಿ ಕಳುಹಿಸಿ ಅವರನ್ನು ಬಹು ವಿಜೃಂಭಣೆಯಿಂದ ಬರಮಾಡಿಕೊಂಡು ಒಂದು ತಿಂಗಳವರೆವಿಗೂ ಇಟ್ಟುಕೊಂಡು ಶ್ರದ್ಧಾಭಕ್ತಿಯಿಂದ ಸೇವೆ ಮಾಡಿ ಧನ್ಯನಾದನು. ಅಲ್ಲದೇ ಶ್ರೀಮಠಕ್ಕೆ ಒಂದು ಲಕ್ಷ ವರಹ, ಮಕರಕಂಠಿ, ಮುತ್ತಿನ ವೈಜಯಂತಿಮಾಲಾ, ಎರಡು ಮಣ ಬಂಗಾರದ ಮಂಟಪ, ನಾಲ್ಕು ಅಂಬಾರಿಯ ಆನೆಗಳು, 25 ಕುದುರೆಗಳನಿತ್ತು ಶ್ರೀ ಸತ್ಯಧರ್ಮರನ್ನು ಆದರಿಸಿದನು. ಇಷ್ಟೇ ಅಲ್ಲದೇ ಶ್ರೀಪಾದಪುತ್ರರಿಗೆ ಬಂಗಾರ ಕಂಠಿ, ಕಿವಿಮುತ್ತು, ಶಿರಶೋಭೆಯ ಅಲಂಕಾರ ಮುಂತಾದವುಗಳನ್ನಿತ್ತು ಸನ್ಮಾನ ಮಾಡಿದನು.

ಅಲ್ಲಿಂದ ಶ್ರೀಮಠವು ಪಂಚವಟಿಗೆ ಬಂದು ಅಲ್ಲಿ ಶ್ರೀ ರಾಮಾಲಯದಲ್ಲಿ ಮಲಗಿದ್ದಾಗ ದಾಶರಥಿಯು ಕನಸಿನಲ್ಲಿ ಕಾಣಿಸಿಕೊಂಡು ದಕ್ಷಿಣದಲ್ಲಿ ಸಂಚಾರ ಮಾಡಿ, ಮೈಸೂರು ರಾಜ್ಯದಲ್ಲಿ 12 ವರ್ಷವಿದ್ದು ಮುಂದೆ ಮಹಾಯಾತ್ರೆ ಮಾಡುವುದು ಎಂದು ಹೇಳಿದಂತಾಯಿತು. ಅಂತೆಯೇ, ಶ್ರೀಗಳವರು ತ್ರಯಂಬಕ ದಲ್ಲಿ ರುದ್ರದೇವರನ್ನು ದರ್ಶನ ಗೈದರು. ಆಗ್ಗ್ಯೆ ಕೊಲ್ಲಾಪುರನಿವಾಸಿನಿ ಪರಮಾತ್ಮನ ಪಟ್ಟದರಾಣಿ, ನಿತ್ಯಮುಕ್ತಳೂ ನಿತ್ಯಾನಪಾಯಿನಿಯೂದ ಶ್ರೀಮಹಾಲಕ್ಷ್ಮಿಯು ಸ್ವಪ್ನದಲ್ಲಿ ದರ್ಶನವಿತ್ತು, ಕೊಲ್ಲಾಪುರಕ್ಕೆ ಬಂದು ತನ್ನನ್ನು ದರ್ಶನ ಮಾಡಿ ಸೇವಿಸುವಂತೆ ಅಪ್ಪಣೆಯಾಯಿತು.

ಶ್ರೀ ಸತ್ಯಧರ್ಮರು ಕೊಲ್ಲಾಪುರದ ಸರಹದ್ದಿನ ಬಳಿ ಸಂಸ್ಥಾನದ ಪೂಜೆ ಮಾಡಿ ಬ್ರಾಹ್ಮಣರ ಭೋಜನಕ್ಕೆ ಕೂಡಿಸುವ ವೇಳೆಯಲ್ಲಿ ಅಲ್ಲಿಯ ರಾಜನು ಆಯಾಸ ಗೊಂಡು ಬಹಳ ಬಾಯಾರಿ ಬಂದನು. ಆಗ ಎಡಸೇವೆಯ ಅನಂತಾಚಾರ್ಯರು ಪಂಕ್ತಿಯಲ್ಲಿ ಕೂತಿದ್ದ ಬ್ರಾಹ್ಮಣರಿಗೆ ತೀರ್ಥವನ್ನು ಹಾಕಲು ಬೆಳ್ಳಿಯ ಗಿಂಡಿಯಲ್ಲಿ ಪಚ್ಚಕರ್ಪೂರಮಿಶ್ರಿತ ತೀರ್ಥವನ್ನು ತೆಗೆದುಕೊಂಡು ಬರುತ್ತಿದ್ದರು. ರಾಜನು ಅವರ ಕೈಯಿಂದ ತೀರ್ಥದ ಗಿಂಡಿಯನ್ನು ಕಸಿದುಕೊಂಡು ಪೂರ್ತಿ ಕುಡಿದುಬಿಟ್ಟು, ಎಲೈ ಬ್ರಾಹ್ಮಣೋತ್ತಮನೆ, ನನ್ನ ದಾಹವನ್ನಿಂಗಿಸಿದೆ, ನಿನಗೆ ಏನು ಬೇಕೋ ಅದನ್ನು ಕೇಳು ಎಂದು ಹೇಳಿದನು. ಅನಂತಾಚಾರ್ಯರು ದಿಕ್ಕೋಚದೇ ಒಂದು ಕ್ಷಣ ಸ್ತಂಭೀಭೂತ ರಾದರು. ಆಮೇಲೆ ಸುಧಾರಿಸಿಕೊಂಡು ಮಹಾರಾಜನನ್ನು ಮನ್ನಣೆ ಮಾಡುತ್ತಾ ಶ್ರೀಮಠದ ದಿವ್ಯಪರಂಪರೆಯನ್ನು ತಿಳಿಸಿ ಮಹಾಸ್ವಾಮಿಗಳಲ್ಲಿ ಕರೆದುಕೊಂಡು ಹೋದರು. ದಿವ್ಯತೇಜೋಪುಂಗವರಾದ ಮಹಾಸ್ವಾಮಿಗಳನ್ನು ನೋಡಿ ಮಹಾರಾಜನು ವಿನೀತನಾಗಿ ಅವರಿಗೆ ವಂದಿಸಿದನು. ಶ್ರೀ ಸತ್ಯಧರ್ಮರು ಅವನನ್ನು ಆದರದಿಂದ ಬರಮಾಡಿಕೊಂಡು ಅವನಿಗೆ ಸತ್ಕರಿಸಿ ಆಶೀರ್ವದಿಸಿದರು. ಮಾರನೇದಿನ, ಶ್ರೀಗಳವರು ಮಾಡಿದ ಶ್ರೀಮೂಲರಾಮ ಸೀತಾದೇವಿಯರ ಪೂಜೆಯನ್ನು ಕಂಡು ಧನ್ಯತಾಭಾವವನ್ನು ಹೊಂದಿದನು. ಅಲ್ಲದೇ, ಶ್ರೀಮಠದ ದಿವ್ಯಾಭರಣದ ಸಂಪತ್ತು, ಶ್ರೀಮಂತಿಕೆಯನ್ನು ಕಂಡು ನಿಬ್ಬೆರಗಾದನು. ಪೂಜೆಯಾದ ಮೇಲೆ, ಮಹಾರಾಜನು ಸ್ವಾಮಿಗಳಲ್ಲಿ ತನಗೆ ಪುತ್ರೋತ್ಸವವನ್ನು ಕರುಣಿಸಬೇಕೆಂದು ವಿನಮ್ರತೆಯಿಂದ ಬೇಡಿದನು. ಹಾಗೂ ಶ್ರೀಮಠವು ತನ್ನ ಸಂಸ್ಥಾನದಲ್ಲಿ ಒಂದು ತಿಂಗಳು ಇದ್ದು ತನ್ನ ಅರಮನೆಯಲ್ಲಿ ಬ್ರಹ್ಮಕರಾರ್ಚಿತವಾದ ಶ್ರೀಮೂಲರಾಮ ಸೀತೆಯರ ಪೂಜೆಯನ್ನು ಮಾಡಿ ಉದ್ಧರಿಸಬೇಕೆಂದು ಕೇಳಿಕೊಂಡನು. ಶ್ರೀಗಳವರು ಅವನ ಆಹ್ವಾನವನ್ನು ಸ್ವೀಕರಿಸಿದರು. ಅಂತೆಯೇ, ಶ್ರೀಗಳವರು ಕೊಲ್ಲಾಪುರಕ್ಕೆ ಬಿಜಯಗೈದರು. ಸಾಯಂಕಾಲ ಶ್ರೀ ಮಹಾಲಕ್ಷ್ಮಿಯ ಗುಡಿಯಲ್ಲಿ ಶ್ರೀಗಳವರನ್ನು ಅದ್ದೂರಿಯಾಗಿ ಸನ್ಮಾನವನ್ನು ಮಾಡಿದನು. ತದನಂತರ ಶ್ರೀಗಳವರು ಪೂಜೆ ಮಾಡಿ

ಮುಗಿಸುವ ಸಮಯದಲ್ಲಿ ದೇವಿಯ ಬಲಗೈಯ ಮೇಲಿಟ್ಟಿದ್ದ ಕಮಲಪುಷ್ಪವು ಮಹಾರಾಜನ ಕೈಯಲ್ಲಿ ಬಿತ್ತು, ಶ್ರೀಗಳವರು ಮಹಾರಾಜಾ, ನಿನಗೆ ಇನ್ನೊಂದು ವರ್ಷದಲ್ಲಿ ಪುತ್ರೋತ್ಸವವಾಗುತ್ತದೆ ಎಂದು ಹೇಳಿ ಮೂರು ಹಿಡಿ ಮಂತ್ರಾಕ್ಷತೆಯನ್ನು ಅವನ ಉಡಿಯಲ್ಲಿ ಹಾಕಿದರು. ರಾಜನು ಮಹಾಲಕ್ಷ್ಮಿಗೆರಗಿ ತನ್ನ ಧನ್ಯತಾಭಾವವನ್ನು ತೋರಿದನು. ಮಾರನೇ ದಿನ ಶ್ರೀಗಳವರಿಗೆ, (1) ಹತ್ತು ಸಾವಿರ ಲಕ್ಷ್ಮೀದೇವಿಯ ವರಹ, (2) ನವರತ್ನಕಲಶದ ಬಂಗಾರದ ಪಲ್ಲಕ್ಕಿ, (3) ರತ್ನದ ಆಭರಣಗಳು, (4) ಬೆಳ್ಳಿ ಬಂಗಾರದ ಆಭರಣಗಳಿಂದ ಕೂಡಿದ ಎರಡು ಅಂಬಾರಿಯ ಆನೆಗಳು, (5) ವಿಧವಿಧವಾದ ಬಂಗಾರದ ಪಾತ್ರೆಗಳನ್ನಿತ್ತು ಮಹಾರಾಜನು ತನ್ನ ಕೃತಜ್ಞತೆಯನ್ನು ಮೆರೆದನು.

ಅಲ್ಲಿಂದ ಸಂಸ್ಥಾನವು ಹಾವೇರಿಗೆ ಬಂದಿತು. ಆಗ್ಗೆ ಹಂಪೆಯ ವಿರೂಪಾಕ್ಷ ಮಠದ ಘನ ಪಂಡಿತರು ಕರ್ಜಗಿಯಲ್ಲಿ ಮಧ್ವಮತದೂಷಕವಾದ ''ಕಲಿ ಮಹಿಮೆ'' ಎಂಬ ಗ್ರಂಥವನ್ನು ಪ್ರಚಾರ ಮಾಡುತ್ತ ''ಮಧ್ವತಂತ್ರ ಮುಖಮರ್ದನ'' ಎಂಬ ಪುಸ್ತಕ ಪ್ರಚಾರ ಮಾಡುತ್ತಿದ್ದರು. ತತ್‌ಕ್ಷಣವೇ, ಶ್ರೀಗಳವರು ಕರ್ಜಗಿಗೆ ಹೋಗಿ ಪಂಡಿತರ ಸಭೆಯನ್ನೇರ್ಪಡಿಸಿ ವಾಕ್ಯಾರ್ಥವನ್ನು ಏರ್ಪಡಿಸಿದರು. ಅದು ಎಂಟು ದಿನಗಳು ನಡೆಯಿತು. ಶ್ರೀ ಸತ್ಯನಾಥರು ಬರೆದಿರುವ 'ಅಭಿನವ ಗಧಾ' ಗ್ರಂಥವು 'ಕಲಿಮಹಿಮೆ'ಯ, ಒಂದೊಂದು ವಾಕ್ಯವನ್ನು ಖಂಡಿಸುತ್ತದೆ. ಅಲ್ಲದೇ ಶ್ರೀ ವಿಜಯೀಂದ್ರ ಸ್ವಾಮಿಗಳು ರಚಿಸಿರುವ ''ಅಪ್ಪಯ್ಯಗಲ್ಲಿಚಪೇಟಿಕಾ'' ಗ್ರಂಥವು ''ಮಧ್ವತಂತ್ರ ಮುಖಮರ್ದನ''ವನ್ನು ಎಲ್ಲಾ ರೀತಿಯಲ್ಲಿಯೂ ಸಂಪೂರ್ಣವಾಗಿ ಖಂಡಿಸಿದೆ ಮತ್ತು ಶ್ರೀ ಸತ್ಯನಾಥರ 'ಅಭಿನವಗಧಾ'ವೂ ಸಹಿತ ಅಪ್ಪಯ್ಯ ದೀಕ್ಷಿತರ ಗ್ರಂಥವನ್ನು ಖಂಡಿಸಿದೆ ಎಂದು ಮತತ್ರಯದವರಿಂದ ಒಪ್ಪಿಸಿದರು. ಅದರಿಂದ ವಿರೂಪಾಕ್ಷ ಮಠದ ಪಂಡಿತರು ಬಹಳ ಖಿನ್ನರಾದರು. ಮುಂದೆ ಸ್ವಾಮಿಗಳವರು ದಿವಾನ್ ಪೂರ್ಣಯ್ಯನವರ ಆಹ್ವಾನದ ಮೇಲೆ ಮೈಸೂರಿಗೆ ಬಂದು ಶ್ರೀ ವರಾಹಸ್ವಾಮಿಯ ಪ್ರತಿಷ್ಠಾಪನೆ ಮಾಡಿ ಹದಿನೈದು ದಿನಗಳು ಅವರಲ್ಲಿಯೇ ಇದ್ದರು. ಅಲ್ಲಿಂದ ಅವರು ಸಂಚಾರ ಹೊರಡಲು ನಿಶ್ಚಯ ಮಾಡಲು ಪೂರ್ಣಯ್ಯನವರು ಹಿಂದೆ ಶ್ರೀ ವೇದವ್ಯಾಸತೀರ್ಥರ ಕಾಲದಲ್ಲಿ ನರಸರಾಜರಿಗೆ ಅನ್ನದಲ್ಲಿ ಹುಳು ಕಾಣಿಸುವುದನ್ನು ತಪ್ಪಿಸಿ ಮೈಸೂರು ರಾಜರಿಗೆ ಬಹಳವಾಗಿ ಅನುಗ್ರಹ ಮಾಡಿದ್ದಾರೆ. ತಾವು ರಾಜ್ಯದೊಳಿತಿಗಾಗಿಯೂ ಅಲ್ಲದೇ ರಾಜರ ಶ್ರೇಯೋಭಿವೃದ್ಧಿಗಾಗಿ ಮೈಸೂರು ರಾಜ್ಯದಲ್ಲಿ ವಾಸವಾಗಿರಬೇಕೆಂದು ಬಹಳವಾಗಿ ಹೇಳಿ ಒಪ್ಪಿಸಿದರು. ಮಹಾಸ್ವಾಮಿಗಳು ಅವರ ಮಾತಿನಂತೆ ಒಪ್ಪಿ ವಶಿಷ್ಠಾಶ್ರಮವೆಂದೇ ಪ್ರತಿಷ್ಠಿತವಾದ ಹೊಳೆ ನರಸೀಪುರದಲ್ಲಿ ಹಿಂದೆ ಶ್ರೀ ವೇದವ್ಯಾಸತೀರ್ಥರು ಕಟ್ಟಿಸಿದ ಮಠದಲ್ಲಿ ಇದ್ದು ವ್ಯಾಖ್ಯಾನ ಟಿಪ್ಪಣಿಗಳನ್ನು ಬರೆಯುತ್ತಿದ್ದು ಭಕ್ತಜನರನ್ನುದ್ಧಾರ ಮಾಡಿದರು. ಮಠದ

ಅಭಿವೃದ್ಧಿಗೆ ಪೂರ್ಣಯ್ಯನವರು 20 ಸಾವಿರ ವರಹಗಳನ್ನು ಕೊಟ್ಟರು. ಮಠದ ಅಭಿವೃದ್ಧಿಯು ದಿವ್ಯವಾಗಿ ಮುಂದುವರೆದು ಹೇಮಾವತಿ ಕಾರಂಜಿಯನ್ನು ಅಲ್ಲದೇ ನಗಾರಿ ನೌಬತ್ತುಗ್ಗಳನ್ನು ಇಡಲು ಹೊಸದಾಗಿ ಮನೆಗಳನ್ನು ಕಟ್ಟಿಸಿತು. ಇದೇ ಸಮಯದಲ್ಲಿ ಮಹಾಸಮಾರಾಧನೆಗೆ ಸುಮಾರು ಹನ್ನೆರಡು ಸಾವಿರ ಜನರು ಸೇರಿದಾಗ ಮಳೆ ಬಂದು ಬ್ರಾಹ್ಮಣರ ಊಟಕ್ಕೆ ತೊಂದರೆಯಾಯಿತು. ಶ್ರೀಗಳವರೇ, ತಾವೇ ಬಂದು ಮಳೆ ನಿಲ್ಲುವಂತೆ ಪ್ರಾರ್ಥನೆ ಸಲ್ಲಿಸಲು ಮಳೆ ನಿಂತು ಸುಗಮವಾಗಿ ಊಟವಾಯಿತು. ಆಗ ಸ್ವಾಮಿಗಳು ನೆಂದಿದ್ದನ್ನು ನೋಡಿ ಪೂರ್ಣಯ್ಯನವರು ತತ್‌ಕ್ಷಣವೇ ಅಲ್ಲಿಯೇ ಇದ್ದ ಅಮಲ್ದಾರರಿಗೆ ಹನ್ನೆರಡು ಸಾವಿರ ಜನರು ಊಟಕ್ಕೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ಮಠವನ್ನು ವಿಸ್ತೀರ್ಣ ಮಾಡಬೇಕೆಂದು ಅಪ್ಪಣೆ ಮಾಡಿದರು. ಮುಂದಿನ ಸಮಾರಾಧನೆ ಅಲ್ಲಿಯೇ ಮಾಡುವ ನಿಮಿತ್ತವಾಗಿ ಅದುವರೆಗೆ ಆಗುವ ಖರ್ಚನ್ನು ಸರಿದೂಗಲು ಅಭಿಷೇಕಕ್ಕೆ ಒಂದು ಸಾವಿರ ಅಮೃತಮಹಲ್ ಹಸುಗಳನ್ನು, ಅವುಗಳ ಮೇವಿಗೆ 500 ಎಕರೆ ಭೂಮಿಯನ್ನು, ದೇವರಿಗೆ ಬೇಕಾಗುವ ತೆಂಗಿನಕಾಯಿಗಳಿಗೆ ಬೆನಗುಳಿ, ಚಕ್ರಗಿರಿ, ಮೆಣಸಿನಹಳ್ಳಿ, ಹನಸೋಗೆಗಳಲ್ಲಿ 4 ತೋಟಗಳನ್ನೂ, ನರಸಿಂಹಪುರದ ತಾಲ್ಲೂಕಿನಲ್ಲಿದ್ದ ಎಲ್ಲಾ ಸರಕಾರದ ಹುಣಸೇಮರಗಳನ್ನು ಮಠದ ಎಲ್ಲಾ ಸೇವಾವೃತ್ತಿಯವರಿಗೆ ಕೊಡುವುದು ಎಂದು ತಾಲ್ಲೂಕು ಕಛೇರಿಗೆ ಅಪ್ಪಣೆ ಮಾಡಿದರು. ಅಲ್ಲದೇ, ಶ್ರೀಮಠದಲ್ಲಿ ನಿಂತು ಶ್ರೀಗಳಿಂದ ಮೂವತ್ತೇಳು ಗ್ರಂಥಗಳನ್ನು ಶಾಂತಿಪಾಠ ಹಾಕಿ ಮಂಗಳ ಮಾಡಿ ಶ್ರೀಪಾದ ಪುತ್ರರಿಗೆ ಅನರ್ಘ್ಯ ಆಭರಣಗಳನ್ನು ನೀಡಿದರು. ಅಲ್ಲದೇ ಇದೇ ಸಮಯದಲ್ಲಿ ಶ್ರೀ ಕಾಶಿತಿಮ್ಮಣ್ಣಾಚಾರ್ಯರಿಗೆ, ಕೌಲಗಿ ಬಾಳಾಚಾರ್ಯರಿಗೆ, ಗಾರ್ಲವಾಡ ಕೃಷ್ಣಾಚಾರ್ಯರಿಗೆ, ಕಲ್ಲಾಪುರದ ರಾಮಾಚಾರ್ಯರಿಗೆ, ಹೈದರಾಬಾದ್ ಅನಂತಾಚಾರ್ಯ ರಿಗೆ, ಬೆಂಗಳೂರು ದಾಸಾಚಾರ್ಯರಿಗೆ ಮತ್ತು ಉಡುಪಿ ವಾಸುದೇವಾಚಾರ್ಯ ಮುಂತಾದವರಿಗೆ ಕಂಠಿ, ಬೆಳ್ಳಿಯ ತಂಬಿಗೆ ಮುಂತಾದವುಗಳನ್ನಿತ್ತು ಸನ್ಮಾನ ಮಾಡಿದರು. ಮುಂದೆ, ನರಸಿಂಹದೇವರ ಮುಂದೆ ಸೋಮಯಾಗವನ್ನು ಬೋಧರಾಯಚಾರ್ಯರ ಕೈಯಲ್ಲಿ ಶ್ರೀಗಳು ಮಾಡಿಸಿ ಗಾರ್ಲವಾಡ ಕೃಷ್ಣಾಚಾರ್ಯರ ಮುಖಾಂತರ ಫಲಮಂತ್ರಾಕ್ಷತೆಯನ್ನು ಮೈಸೂರು ಮಹಾರಾಜರಿಗೆ ತಲುಪಿಸಲು ಪೂರ್ಣಯ್ಯನವರು ವ್ಯವಸ್ಥೆ ಮಾಡಿದರು. ಶ್ರೀಗಳವರು ಹೊಳೆನರಸೀಪುರದಲ್ಲಿ 15 ವರ್ಷಗಳು ಇದ್ದು ಪಾಠಪ್ರವಚನಗಳನ್ನು ಮಾಡುತ್ತಾ 16 ಸಲ ಶ್ರೀ ನ್ಯಾಯಸುಧಾ ಮಂಗಲವನ್ನು ಮಾಡಿದರು. ಅಲ್ಲದೇ, ಶ್ರೀ ಸತ್ಯಸಂಧರ ಕಾಲದಲ್ಲಿ ಆಸ್ಥಾನ ಪಂಡಿತ ರಾಗಿದ್ದ ತಿರುಪತಿ ಬಾಳಾಚಾರ್ಯರಿಂದ ರಚಿತವಾಗಿದ್ದ ಷಟ್‌ಶಾಸ್ತ್ರ ಕ್ರೋಡಪತ್ರಗಳನ್ನು ಝುಲಿಪಿ ಕೃಷ್ಣಾಚಾರ್ಯರಿಂದ ಓದಿಸಿ ಕೇಳುತ್ತಿದ್ದರು. ಮುಂದೆ ಪೂರ್ಣಯ್ಯನವರು ದಿವಾನರ ಹುದ್ದೆಯಿಂದ ನಿವೃತ್ತರಾಗುವ ಮುಂಚೆ ಶ್ರೀಗಳಲ್ಲಿ ಬಂದು ಅರಮನೆಯಿಂದ

ಕೊಡಲ್ಪಟ್ಟ ಎಲ್ಲಾ ಒಡವೆ ವಸ್ತುಗಳ ಮೇಲೆ ಶ್ರೀ ಕೃಷ್ಣರಾಜ ಒಡೆಯರ ಹೆಸರು ಹಾಗೂ ವಿಳಾಸವನ್ನು ಕೆತ್ತಿಸಿದರು. ಮತ್ತು ತಮ್ಮ ಕಡೆಯ ಕಾಣಿಕೆಯಾಗಿ ಮಠಕ್ಕೆ 30 ಸಾವಿರ ವರಹಗಳನ್ನಿತ್ತು ಶ್ರೀ ಸತ್ಯಧರ್ಮರಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಅವರಿಂದ ಭಕ್ತಿಯುತವಾಗಿ ಫಲಮಂತ್ರಾಕ್ಷತೆಯನ್ನು ಪಡೆದು ಧನ್ಯತಾಭಾವವನ್ನು ಪ್ರದರ್ಶಿಸಿದರು. ಶ್ರೀ ಪೂರ್ಣಯ್ಯನವರು ಮೈಸೂರು ರಾಜ್ಯದ ದಿವಾನರ ಪದವಿಯನ್ನಲಂಕರಿಸಿದ್ದರೂ ಶ್ರೀಗಳವರ ಮುಂದೆ ವಿನಯದ ಮೂರ್ತಿಯಾಗಿ ಭಗವಂತನ ಭಕ್ತರ ಭಕ್ತರಾಗಿದ್ದರು. ಅಲ್ಲಿಂದ ಪೂರ್ಣಯ್ಯನವರು ರಾಮನಾಥಪುರಕ್ಕೆ ಹೋಗಿ, ಮುಂದೆ ಮೈಸೂರಿಗೆ ಹೋಗಿ ತಮ್ಮ ಹುದ್ದೆಯಿಂದ ನಿವೃತ್ತಿ ಹೊಂದಿದರು. ರಾಜಭಕ್ತಿಗೆ, ಶಕ್ತಿಸಾಮರ್ಥ್ಯಗಳಿಗೆ, ವ್ಯವಹಾರಕೌಶಲ್ಯಕ್ಕೆ, ರಾಜತಾಂತ್ರಿಕತೆಗೆ, ಬುದ್ಧಿಮತ್ತೆಗೆ ಮತ್ತೊಂದು ಹೆಸರಾಗಿದ್ದ ಪೂರ್ಣಯ್ಯನವರು ಮೈಸೂರು ರಾಜ್ಯದ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಯಾಗಿಸಿಕೊಂಡಿದ್ದಾರೆ. ಮಾಧ್ವ ಮಠಗಳ ಏಳಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಜನರ ಉಪಕಾರಕ್ಕೆ ಛತ್ರಗಳನ್ನು ಕಟ್ಟಿಸಿದ್ದಾರೆ. ಅವು ಇಂದಿಗೂ ಪೂರ್ಣಯ್ಯನವರ ಛತ್ರವೆಂದೇ ಹೆಸರಾಗಿದೆ. ಪೂರ್ಣಯ್ಯನವರ ಹೆಸರು ದೇಶವಿದೇಶಗಳಲ್ಲಿಯೂ ಹರಡಿತ್ತು. ಪೂರ್ಣಯ್ಯನವರು ಮೈಸೂರು ಸಂಸ್ಥಾನ ದಿವಾನರಾಗಿ 1800ರಿಂದ 1812ರವರೆಗೆ 12 ವರ್ಷಗಳು ಇದ್ದರು. ಸರ್ ಜೀನ್ ಮಾಲ್ಕಮ್‌ನು ಬರೆದಿಟ್ಟಿರುವ ಡೈರಿಯಲ್ಲಿ "ಪೂರ್ಣಯ್ಯನವರ ಹಿತಶತ್ರುಗಳು ಮಹಾರಾಜರ ಮನಸ್ಸನ್ನು ಕೆಡಿಸಿದ್ದರು. ಸದಾ ಹೆಚ್ಚು ಹೆಚ್ಚು ಹಣವನ್ನು ಕೇಳಲಾಗುತ್ತಿತ್ತು. ಇದು ಅನವಶ್ಯಕವೆಂದು ಪೂರ್ಣಯ್ಯನವರಿಗೆ ತಿಳಿದಿತ್ತು. ಪ್ರಜೆಗಳು ನೀಡುವ ತೆರಿಗೆ ಅವರ ಜೀವನಮಟ್ಟ ಉತ್ತಮ ಪಡಿಸುವುದೇ ಆಗಿದೆ, ಮಹಾರಾಜರ ಭೋಗಕ್ಕಲ್ಲ ಎಂದು ಖಚಿತವಾಗಿ ತಿಳಿದಿದ್ದರು ಪೂರ್ಣಯ್ಯ. ...... ಮಹಾರಾಜರು ವಿರೋಧಿಗಳ ಮಾತನ್ನು ಕೇಳುತ್ತಿರುವುದು ಪೂರ್ಣಯ್ಯನವರಿಗೆ ಅಸಹನೀಯವಾಯಿತು. ಅಧಿಕಾರವನ್ನು ಬಿಟ್ಟು ಬಂದರು....... 27.3.1812ರಂದು ಪೂರ್ಣಯ್ಯನವರು ಶ್ರೀರಂಗಪಟ್ಟಣದಲ್ಲಿ ತಮ್ಮ ಕೊನೆ ಉಸಿರೆಳೆದರು......... ಒಂದು ಸಣ್ಣ ಸಂಸ್ಥಾನದ ದಿವಾನರೊಬ್ಬರು, ಅದರಲ್ಲಿಯೂ ಈಸ್ಟ್ ಇಂಡಿಯಾ ಕಂಪನಿಯ ಅಧೀನದಲ್ಲಿದ್ದವರು ಅಪ್ರತಿಮ ರಾಜಕಾರಣಿಗಳೆನಿಸಿದವರು ಬ್ರಿಟಿಷರ ಶ್ಲಾಘನೆಗೆ ಪಾತ್ರರಾದುದು ಆಶ್ಚರ್ಯವೆನಿಸುತ್ತದೆ. ಇಂದಿಗೂ, ಎಂದೆಂದಿಗೂ ಕನ್ನಡಿಗರ ಮನಸ್ಸಿನಲ್ಲಿ ನೆಲೆಯಾಗಿ ನಿಂತವರು ದಿವಾನ್ ಪೂರ್ಣಯ್ಯನವರು". (ಪುಟ 134, ಕಸ್ತೂರಿ, ಅಕ್ಟೋಬರ್ 2000)

ಶ್ರೀ ಸತ್ಯಧರ್ಮರು ಸೋಮಯಾಗಾನಂತರ ತಮ್ಮ ಗುರುಗಳ ಬೃಂದಾವನವನ್ನು ಸೇವಿಸಲು ಸಂತೇಬಿದನೂರಿಗೆ ಬಂದರು. ಅಲ್ಲಿ ಶ್ರೀಮೂಲರಾಮ ಸೀತಾದೇವಿಯರ ಪೂಜೆಯನ್ನು ಬಹು ವಿಜೃಂಭಣೆಯಿಂದ ಮಾಡಿ ಬ್ರಾಹ್ಮಣ

ಸುವಾಸಿನಿಯರಿಗೆ ಭೋಜನವನ್ನು ಮಾಡಿಸಿದರು. ಜನಮೇಜಯ ಪ್ರತಿಷ್ಠಿತ ಪ್ರಾಣದೇವರನ್ನು ಪೂಜೆ ಮಾಡಿ ಮಠದ ಭಕ್ತರಿಗೆಲ್ಲಾ ಮುದ್ರಾಧಾರಣ ಮಾಡಿ ಪುನೀತಗೊಳಿಸಿದರು. ಶ್ರೀ ಸತ್ಯಧರ್ಮರ ಕಾಲದಲ್ಲಿ ಶ್ರೀಮದುತ್ತರಾದಿ ಮಠದ ಸಂಸ್ಥಾನವು ಸಂಚಾರ ಕೈಗೊಂಡರೆ ರಾಜಮಹಾರಾಜರು ರಾಜವೈಭವದಿಂದ ಆನೆಗಳು, ಕುದುರೆ, ಸಿಪಾಯಿಗಳು ಮೆರವಣಿಗೆಯಲ್ಲಿ ಹೋಗುವಂತೆ ಹೋಗುತ್ತಿತ್ತು. ಶ್ರೀಮೂಲರಾಮ, ಸೀತಾದೇವಿ, ದಿಗ್ವಿಜಯರಾಮ, ವಂಶರಾಮ, ವೇದವ್ಯಾಸರ ಕೀರ್ತಿ, ಮಹಿಮೆ, ಶ್ರೀ ಸತ್ಯಧರ್ಮರ ಕಾಲದಲ್ಲಿ ಉತ್ತುಂಗಕ್ಕೇರಿತ್ತು. ಶ್ರೀಮದುತ್ತರಾದಿ ಮಠದ ಹಾಗೂ ಶ್ರೀ ಸತ್ಯಧರ್ಮರ ಮಹಿಮೆ ಮತ್ತು ಹೆಸರು ಜಗಜ್ಜನಿತವಾಗಿತ್ತು. ಇದನ್ನು ಬಹಳಷ್ಟು ಜನ ಸಂತೋಷಪಟ್ಟವರಾದರೆ, ಮತ್ತೆ ಕೆಲವರು ಸಹಿಸುತ್ತಿರಲಿಲ್ಲ. ಯುವ ನಾಮ ಸಂವತ್ಸರದಲ್ಲಿ ಒಂದು ದಿನ ಮಠದ ಉಗ್ರಾಣದಲ್ಲಿ ಬೆಂಕಿ ಕಾಣಿಸಿ ಕೊಂಡು ಜ್ವಾಲೆಯು ಮಠಕ್ಕೆಲ್ಲಾ ಹರಡಿತು. ಅಕ್ಕಪಕ್ಕದ ಜನರು, ಶಿಷ್ಯರು, ಭಕ್ತರು ತಮ್ಮ ಜೀವದ ಹಂಗನ್ನು ತೊರೆದು ಬೆಂಕಿಯನ್ನು ನಂದಿಸಲು ಸತತ ಪ್ರಯತ್ನ ಮಾಡಿದರು. ಅಲ್ಲದೇ, ಜ್ವಾಲೆಯ ಮಧ್ಯದಲ್ಲಿ ಸಿಕ್ಕಿದ್ದ ಶ್ರೀಗಳನ್ನು ಹಾಗೂ ದೇವರ ಮನೆಯಲ್ಲಿದ್ದ ಶ್ರೀಮೂಲರಾಮ ಸೀತಾದೇವಿಯರನ್ನು ಬಹಳ ಕಷ್ಟಪಟ್ಟು ಅಭಿಶ್ರೀನಿವಾಸಾಚಾರ್ಯರು ತಮ್ಮ ಜೀವವನ್ನು ಲೆಕ್ಕಿಸದೇ ಹೊರಗೆ ತಂದರು. ಝುಲಪಿ ಕೃಷ್ಣಾಚಾರ್ಯರು, ಆಚಾರಪ್ಪಾಚಾರ್ಯರು ಸಹ ಬೆಂಕಿಯೊಳಗೆ ನುಗ್ಗಿ ದೇವರ ಪೆಟ್ಟಿಗೆ ಗಳನ್ನು ಹೊರತಂದರು. ತಪೋಬಲವುಳ್ಳವರಾದ ಶ್ರೀಗಳು ಮರುದಿನವೇ ಗುಣಮುಖರಾದರು. ಮಿಕ್ಕವರು 5–6 ದಿನಗಳಲ್ಲಿ ಗುಣ ಹೊಂದಿದರು. ಬೆಂಕಿಯ ಜ್ವಾಲೆ ಪೂರ್ಣವಾಗಿ ಶಾಂತವಾಗಲು ಸುಮಾರು ಎಂಟು ದಿನಗಳು ಹಿಡಿಯಿತು. ಬೆಂಕಿಯಲ್ಲಿ ಎಷ್ಟೋ ದಾನಪತ್ರಗಳು, ರಾಜಶಾಸನಗಳು, ಸಂಸ್ಥಾನದ ನವರತ್ನಖಚಿತ ವಾದ ಆಭರಣಗಳು ಸುಟ್ಟುಹೋದವು. ಶ್ರೀಮೂಲರಾಮರ ದಯೆ ಹಾಗೂ ಗುರುಗಳ ಅನುಗ್ರಹದಿಂದ ದೇವರ ಪ್ರತಿಮೆಗಳು ಶ್ರೀ ವೇದವ್ಯಾಸರ ಪುಸ್ತಕ ಭಂಡಾರವು ಬೆಂಕಿಯಿಂದ ಹಾನಿಗೊಳಗಾಗದೇ ಪವಾಡಸದೃಶವಾಗಿ ಉಳಿದವು. ಈ ವಿಷಯವನ್ನು ಅಮಲ್ದಾರರಿಂದ ತಿಳಿದ ದಿವಾನ್ ಬಾಬುರಾಯರು ಶ್ರೀಗಳವರನ್ನು ಕಂಡು ಬೆಲೆಬಾಳುವ ವಸ್ತುಗಳ ನಾಶಕ್ಕೆ ಯೋಚಿಸಕೂಡದೆಂದು ಹೇಳಿ ಸುಟ್ಟ ಬೂದಿಯಲ್ಲಿ ಏನಾದರೂ ಸುಡದೇ ಇರುವ ವಸ್ತುಗಳಿರುವುದೇ ಎಂದು ಹುಡುಕಿಸಿ ದರು. ನಾಲ್ಕು ಸೇರು ನವರತ್ನಗಳು, ಕುಂದಕೃಷ್ಣಾಜಿ ಪಂತರ ಪಚ್ಚೆದ ರಾಮಮೂರ್ತಿಯೂ, ವಿಜಯನಗರದ ಪದಕವೂ, ಬಾಜೀರಾಯನಿತ್ತ ಕೆಲವು ಪದಕ, ವೈಜಯಂತಿಮಾಲೆ ಗಳೂ ಸಿಕ್ಕವು. ಬಾಬುರಾಯರು ಮಹಾರಾಜರ ಅಪ್ಪಣೆಯ ಮೇಲೆ 2 ಲಕ್ಷ ವರಹ ಗಳಿಂದ 8 ದಿನಗಳಲ್ಲಿ ಪೂಜೆಯ ಉಪಕರಣಗಳನ್ನು, ಹಾರಗಳನ್ನು ಸಿದ್ಧಪಡಿಸಿದರು. ಪೂಜೆ ಯಥಾಪ್ರಕಾರ ನಡೆಯುವಂತಾಯಿತು.

ಇದಾದ ಮೇಲೆ ಶ್ರೀಗಳವರು ಕಾಶೀಯಾತ್ರೆಗೆ ಹೋಗಿ ಚಿತ್ರಭಾನು ಸಂವತ್ಸರಕ್ಕೆ ಮೈಸೂರು ರಾಜ್ಯಕ್ಕೆ ಬಂದರು. ಶ್ರೀಗಳಿಗೆ ಶ್ರೀರಂಗಪಟ್ಟಣದ ಬಳಿ ಸುಬ್ಬರಾಯನ ಕೊಪ್ಪಲು ಕಿರಂಗೂರಲ್ಲಿ ದೇಹಾಲಸ್ಯವುಂಟಾಯಿತು. ಶ್ರೀಗಳವರು ದಿವಾನ್ ಬಾಬುರಾಯರನ್ನು, ಝುಲಪಿ ಕೃಷ್ಣಾಚಾರ್ಯರನ್ನು ತಮ್ಮಲ್ಲಿಗೆ ಕರೆಸಿಕೊಂಡು ತಮ್ಮ ಪೂರ್ವಾಶ್ರಮ ತಮ್ಮಂದಿರಾದ ನವರತ್ನ ಶ್ರೀನಿವಾಸಾಚಾರ್ಯರಿಗೆ ಆಶ್ರಮವನ್ನಿತ್ತು ಶ್ರೀ ಸತ್ಯಸಂಕಲ್ಪರೆಂದು ಹೆಸರಿಸಿ ಸಂಸ್ಥಾನವನ್ನು ವಹಿಸಿದರು. ಆ ಸಂದರ್ಭದಲ್ಲಿ ಮೈಸೂರು ಮಹಾರಾಜರು ಉಭಯಶ್ರೀಗಳನ್ನು ದರ್ಶನ ಮಾಡಿ ಫಲಮಂತ್ರಾಕ್ಷತೆ ಆಶೀರ್ವಾದವನ್ನು ಪಡೆದರು. ಸ್ವಲ್ಪ ಕಾಲದಲ್ಲಿಯೇ ಶ್ರೀ ಸತ್ಯಧರ್ಮರು ಅನಾರೋಗ್ಯದಿಂದ ಸುಧಾರಿಸಿಕೊಂಡರು. ಇವರ ದೇಹಸ್ಥಿತಿ ಸುಧಾರಿಸಿದ ಮೇಲೆ ಮಹಾರಾಜರು ಹಿರಿಯ ಹಾಗೂ ಕಿರಿಯ ಸ್ವಾಮಿಗಳಿಗೆ ಯಾವುದೇ ಮನಸ್ತಾಪ ಬರದಿರಲೆಂದು ಮಠದ ವ್ಯವಸ್ಥಾಪಕರನ್ನು ಹಾಗೂ ಮುಖ್ಯಸ್ಥರನ್ನು ಕರೆಸಿಕೊಂಡು ಸ್ವಾಮಿಗಳಿಬ್ಬರ ಮಕ್ಕಳಾದ ಬೋಧರಾಯಚಾರ್ಯರು ಹಾಗೂ ಮುದ್ಗಲಾಚಾರ್ಯರಿಬ್ಬರೂ ಮಹಾವಿದ್ವಾಂಸರಾಗಿದ್ದು ಅವರೊಳಗೆ ಅಧಿಕಾರಕ್ಕೋಸ್ಕರ ಜಗಳ ಬರಬಾರದು. ಆದ್ದರಿಂದ ದೊಡ್ಡವರು ವೃದ್ಧರಾಗಿರುವುದರಿಂದ ವಂಶರಾಮ ದೇವರನಿಟ್ಟುಕೊಂಡು ಸಂಚಾರ ಮಾಡಲಿ, ಚಿಕ್ಕವರು ಮಹಾಸಂಸ್ಥಾನಾಧಿಪತ್ಯವನ್ನು ಹೊಂದಲಿ ಎಂದು ಹೇಳಿದರು. ಮಠದಲ್ಲಿರುವವರು ಕೆಲವರು ಹಿರಿಯರ ಜೊತೆಗೂ ಮತ್ತೆ ಕೆಲವರು ಕಿರಿಯರ ಜೊತೆಗಿರಬೇಕೆಂದು ಹೇಳಿದರು. ಹಿರಿಯ ಸ್ವಾಮಿಗಳಿಗೆ ವರ್ಷಕ್ಕೆ ಹನ್ನೆರಡು ಸಾವಿರ ವರಹವನ್ನು ಸಲ್ಲಿಸುವುದೆಂದು ಹೊಳೆನರಸೀಪುರದ ತಾಲ್ಲೂಕು ಕಛೇರಿಗೆ ಅಪ್ಪಣೆ ಮಾಡಿದುದಲ್ಲದೇ, ಹಿರಿಯ ಸ್ವಾಮಿಗಳು ಮತ್ತೊಬ್ಬರಿಗೆ ಆಶ್ರಮ ಕೊಡದಂತೆ ಜಾಗರೂಕತೆ ವಹಿಸಬೇಕೆಂದು ಹೇಳಿ ಮೈಸೂರಿಗೆ ಹೋದರು. ಮಹಾರಾಜರು ಎಣಿಸಿದಂತೆ ಸ್ವಾಮಿಗಳ ಪುತ್ರರಿಬ್ಬರಲ್ಲಿಯೂ ಭಿನ್ನಾಭಿಪ್ರಾಯ ವುಂಟಾಗಿ, ಶ್ರೀ ಸತ್ಯಧರ್ಮರು ರಾಮೇಶ್ವರ ಯಾತ್ರೆಯನ್ನು, ಶ್ರೀ ಸತ್ಯಸಂಕಲ್ಪರು ಮೈಸೂರು ರಾಜ್ಯದಲ್ಲಿ ಸಂಚಾರ ಮಾಡಿದರು. ರಾಮೇಶ್ವರಕ್ಕೆ ಹೋಗಿ ಶ್ರೀರಾಮನಾಥನ ದರ್ಶನ ಮಾಡಿಕೊಂಡು ಹಿಂತಿರುಗುವಾಗ ಅರಣಿಯಲ್ಲಿ ಅಲ್ಲಿಯ ಜಮೀನ್ದಾರನು ಮಹಾಸ್ವಾಮಿಗಳನ್ನು ಕಂಡು ತೀವ್ರ ಕ್ಷಾಮದಿಂದ ತತ್ತರಿಸುತ್ತಿರುವ ತಮ್ಮನ್ನು ಹೇಗಾದರೂ ಪಾರು ಮಾಡಬೇಕೆಂದು ಕೇಳಿಕೊಂಡನು. ಅಲ್ಲಿಯ ಜನರ ಹಾಗೂ ಅವನ ಪರಿಸ್ಥಿತಿಯನ್ನು ಕಂಡು ಶ್ರೀಗಳವರು ಮರುಗಿ ತಮ್ಮ ತಪಃಪ್ರಭಾವ ದಿಂದ ಪರಿಸ್ಥಿತಿಯನ್ನು ಸುಧಾರಿಸುವಂತೆ ಮಾಡಿದರು. ಆಗ ಜಮೀನ್ದಾರನು ಶ್ರೀಮಠಕ್ಕೆ ಬಂಗಾರದ ಕಡಾಯಿಯನ್ನು ಮಾಡಿಸಿಕೊಟ್ಟು ತನ್ನ ಕೃತಜ್ಞತೆಯನ್ನು ತೋರಿದನು. ಅರಣಿಯಿಂದ ಬರುವ ದಾರಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಬೆಂಗಳೂರಿನಲ್ಲಿ ಶ್ರೀಗಳನ್ನು ಭೇಟಿ ಮಾಡಿ ಅಲ್ಲಿಂದ ಇಬ್ಬರೂ ಒಟ್ಟಿಗೆ ಮೈಸೂರಿಗೆ

ಬಂದರು. ಈ ಸಮಯದಲ್ಲೇ ಈಗ ಚಿಕ್ಕಪೇಟೆಯಲ್ಲಿರುವ ಉತ್ತರಾದಿ ಮಠದಲ್ಲಿ ಶ್ರೀಗಳು ಪ್ರಾಣದೇವರನ್ನು ಪ್ರತಿಷ್ಠೆ ಮಾಡಿರಬಹುದು. ಈ ಪ್ರಾಣದೇವರು ಸುಮಾರು 175 ವರ್ಷಗಳ ಹಿಂದಿನದು ಎಂದು ಹೇಳಬಹುದು. ಇದನ್ನು ಅಭಿನವ ಆನಂದತೀರ್ಥರೆಂದೇ ಪ್ರಖ್ಯಾತರಾಗಿರುವ **ಶ್ರೀ ಸತ್ಯಧ್ಯಾನತೀರ್ಥ**ರ ಕಾಲದಲ್ಲಿ ಹಾಗೂ ಪ್ರಾತಃಸ್ಮರಣೀಯರಾದ **ಶ್ರೀ ಸತ್ಯಪ್ರಮೋದರ** ಕಾಲದಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಶ್ರೀ ಸತ್ಯಧರ್ಮರಿಂದ ಪ್ರತಿಷ್ಠೆಗೊಂಡ ಮುಖ್ಯಪ್ರಾಣ ದೇವರು ಎದುರು ಮುಖನಾಗಿ ಕೈ ಜೋಡಿಸಿ (ಅಂಜಲೀಬದ್ಧನಾಗಿ) ನಿಂತಿರುವವನಾಗಿದ್ದು ಭಕ್ತಾಭೀಷ್ಟದಾಯಕನಾಗಿದ್ದಾನೆ. ತನುಮನದಿಂದ ಸೇವಿಸುವವರಿಗೆ ಮನೋವಾಂಛಿತ ಫಲದಾತನಾಗಿರುವುದು ಒಂದು ವೈಶಿಷ್ಟ್ಯ. ಇಲ್ಲಿ ಧನುರ್ಮಾಸ ಪೂಜೆ, ಮಧು ಅಭಿಷೇಕ, ನಿತ್ಯಪೂಜೆ, ಪಂಚಾಮೃತ ಬಹಳ ವಿಶಿಷ್ಟ ರೀತಿಯಲ್ಲಿ ನಡೆಯುತ್ತದೆ. ಮಧು ಅಭಿಷೇಕವಂತೂ ಕಷ್ಟಪರಂಪರೆಗಳನ್ನು ನಿವಾರಿಸುವುದು ಖಚಿತವೆಂದೇ ಹೇಳ ಬಹುದು. ಮಾಡಿಸುವವರ ನಂಬಿಕೆ ಮತ್ತು ಭಕ್ತಿಯು ಪ್ರಾಧಾನ್ಯ. ಶ್ರೀ ಸತ್ಯಧರ್ಮರಿಗೆ ಹೊಳೆನರಸೀಪುರದಲ್ಲಿ ನರಸಿಂಹದೇವರು ಸಾಕ್ಷಾತ್ಕರಿಸಿ ಗಂಧಪ್ರಸಾದವನ್ನು ನೀಡಿ ದರ್ಶನವಿತ್ತುದರಿಂದ, ಪ್ರಾಣದೇವರ ಮೇಲೆ ಇಲ್ಲಿ ನರಸಿಂಹ ದೇವರನ್ನು ಕೆತ್ತಿಸಿರಬಹುದು. ಪ್ರಾಣದೇವರು ಸುಮಾರು ಎರಡೂವರೆ ಅಡಿ ಎತ್ತರವಿರಬಹುದು.

ಮಹಾಸ್ವಾಮಿಗಳಾದ ಶ್ರೀ ಸತ್ಯಧರ್ಮತೀರ್ಥರು ತಮ್ಮ ಜೀವಿತದ ಕೊನೆಯ ದಿನಗಳನ್ನು ಬಹಳಷ್ಟು ಹೊಳೆನರಸೀಪುರದಲ್ಲಿ ಕಳೆದರಂತೆ. ಅವರು ಅಲ್ಲಿಯೇ ಬೃಂದಾವನಸ್ಥರಾಗಬೇಕೆಂದು ಉತ್ಕಟೇಚ್ಛೆಯನ್ನು ಹೊಂದಿದ್ದರಂತೆ. ತಮ್ಮ ವೃಂದಾವನ ಸ್ಥಾಪಿಸಿಕೊಳ್ಳಬೇಕೆಂದ ಸ್ಥಳದಲ್ಲಿ ಈಗ ಮಠದಲ್ಲಿರುವ ಮುಖ್ಯಪ್ರಾಣ ದೇವರನ್ನು ಸ್ಥಾಪಿಸಿದರಂತೆ. ಇಲ್ಲಿರುವ ಮಠವು ದೊಡ್ಡದಾಗಿದ್ದು ಮಠದ ಹೆಬ್ಬಾಗಿಲಿ ನಿಂದ ಆನೆಯ ಮೇಲೆ ಕುಳಿತು ಒಳಗೆ ಹೋಗಬಹುದಾದಷ್ಟು ದೊಡ್ಡದಾಗಿದೆ. ಮಠವು ಹೇಮಾವತಿ ನದೀತೀರದಲ್ಲಿದೆ. ಮಠವನ್ನು ಸ್ವಚ್ಛವಾಗಿಟ್ಟಿದೆ.

ಮಠದ ವ್ಯವಸ್ಥೆಯ ಬಗ್ಗೆ ಶ್ರೀಪಾದ ಪುತ್ರರಾದ ಬೋಧರಾಯಚಾರ್ಯರು ಹಾಗೂ ಝುಲಪಿ ಕೃಷ್ಣಾಚಾರ್ಯರು ಮಹಾರಾಜರಲ್ಲಿ ಹೋದಾಗ ಮಹಾರಾಜರು ಶ್ರೀಗಳವರು ಹೊಸದೊಂದು ಮಠವನ್ನು ಕಟ್ಟಿಸಿಕೊಳ್ಳಲು 15 ಸಾವಿರ ವರಹಗಳನ್ನು ನೀಡಿದರು. ಅಲ್ಲಿಂದ ಮುಂದೆ ಶ್ರೀಗಳವರು ಹೊಳೆಹೊನ್ನೂರಿನಲ್ಲಿ ಮಠವನ್ನು ಕಟ್ಟಿಸಿಕೊಂಡು ವಿಕೃತಿನಾಮ ಸಂವತ್ಸರದ ಶ್ರಾವಣ ಬಹುಳ ತ್ರಯೋದಶಿವರೆವಿಗೂ ಇದ್ದು ಇಲ್ಲಿಯೇ ವೃಂದಾವನಸ್ಥರಾದರು. ಹೊಳೆಹೊನ್ನೂರು ಶಿವಮೊಗ್ಗದಿಂದ ಹರಿಹರಕ್ಕೆ ಹೋಗುವ ಹೆದ್ದಾರಿಯಲ್ಲಿದೆ. ಮಠವು ಬಹಳ ದೊಡ್ಡದಾಗಿದೆ. ಭದ್ರಾನದಿಯ ದಂಡೆಯ ಮೇಲಿದೆ. ಇಲ್ಲಿಂದ ಸುಮಾರು 2–3 ಕಿ.ಮೀಗೆ ದೂರ

ದಲ್ಲಿರುವ ಕೂಡಲಿಯಲ್ಲಿ ತುಂಗಾ ಹಾಗೂ ಭದ್ರಾ ನದಿಗಳು ಸಂಗಮವಾಗಿ ತುಂಗಭದ್ರಾ ನದಿಯಾಗಿ ಮುಂದೆ ಹರಿಯುತ್ತದೆ. ಕೂಡಲಿಯಲ್ಲಿ ಅಕ್ಷೋಭ್ಯತೀರ್ಥರ ವೃಂದಾವನವಿದೆ. ಅಲ್ಲದೇ ಇಲ್ಲಿ ನಿಂತಿರುವ ಶಾರದಾದೇವಿಯ ದೇವಸ್ಥಾನವಿದೆ. ಮತ್ತು ಶ್ರೀ ಶಂಕರಾಚಾರ್ಯರ ಕೂಡಲಿ ಸಂಸ್ಥಾನದ ಮಠವಿದೆ. ಶ್ರೀಗಳ ಆರಾಧನೆ ಮೂರು ದಿನ – ಶ್ರಾವಣ ಬಹುಳ ದ್ವಾದಶಿ, ತ್ರಯೋದಶಿ, ಚತುರ್ದಶಿಯಂದು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಇಲ್ಲಿಗೆ ಬೆಂಗಳೂರು, ಹರಿಹರ, ಶಿವಮೊಗ್ಗೆಯಿಂದ ಬಸ್ಸುಗಳು ಬೇಕಾದಷ್ಟು ಸಿಗುತ್ತವೆ.

ಶ್ರೀ ಸತ್ಯಧರ್ಮತೀರ್ಥರು ನರಸಿಂಹದೇವರನ್ನು ಹಾಗೂ ರುದ್ರದೇವರನ್ನು ಸಾಕ್ಷಾತ್ಕರಿಸಿಕೊಂಡ ಯತಿಪುಂಗವರು. ಒಮ್ಮೆ ಶ್ರೀಗಳವರು ತಮ್ಮ ಗುರುಗಳ ಆರಾಧನೆ ಮಾಡಿ, ತಾವು ಹಾಗೂ ಕಿರಿಯ ಶ್ರೀಗಳ ಜೊತೆ ಊಟಕ್ಕೆ ಕೂಡ ಬೇಕೆಂದಿರುವಾಗ ಒಬ್ಬ ಸ್ಮಾರ್ತ ಬ್ರಾಹ್ಮಣನು ಜಟೆಯನ್ನು ಧರಿಸಿ ಅವರ ಪದ್ಧತಿ ಯಂತೆ ಅಡ್ಡಗಂಧವನ್ನು ಧರಿಸಿ ಬಂದನು. ಬಂದ ಬ್ರಾಹ್ಮಣನು ನೋಡಲು ಬಹಳ ಲಕ್ಷಣವಾಗಿ, ತೇಜೋಮೂರ್ತಿಯಾಗಿದ್ದನು. ಶ್ರೀಗಳವರು ಬಂದ ಬ್ರಾಹ್ಮಣನನ್ನು ಅಲಂಕಾರಪಂಕ್ತಿಯಲ್ಲಿ ಭೋಜನಕ್ಕೆ ಕೂಡಿಸಿದರು. ಆಗ, ಅಲ್ಲಿದ್ದವರು ಅಸಮಾಧಾನ ತೋರಿಸಲು, ಅದನ್ನು ಲೆಕ್ಕಿಸದೆ ಆ ಬ್ರಾಹ್ಮಣನಿಗೆ ಬೆಳ್ಳಿ ತಂಬಿಗೆ, ಪಂಚಪಾತ್ರೆ, ಧೋತ್ರ ಇತ್ಯಾದಿಗಳನ್ನು ಕೊಟ್ಟು ಸತ್ಕರಿಸಿದರು. ಶ್ರೀಪಾದಪುತ್ರರು ಮೊದಲಾಗಿ ಇತರರು ಕುತೂಹಲಭರಿತರಾಗಿರುವುದನ್ನು ಕಂಡು ಊಟವಾದ ಮೇಲೆ ಆ ಬ್ರಾಹ್ಮಣನು ಎಲ್ಲಿ ಹೋದನೆಂಬುದನ್ನು ತಿಳಿಯಲು ಶ್ರೀಗಳವರು ಹೇಳಿದರು. ತಿಳಿಯಲು ಹೋದವರು ಆ ಬ್ರಾಹ್ಮಣನನ್ನು ಹಿಂಬಾಲಿಸಿ, ಅವನು ಊರ ಮುಂದಿದ್ದ ರುದ್ರದೇವರ ಗುಡಿಯಲ್ಲಿ ಹೋಗಿದ್ದನ್ನು ನೋಡಿದರು. ಆಮೇಲೆ, ಅವರುಗಳು ಗುಡಿಯ ಬಾಗಿಲನ್ನು ತೆಗೆದು ನೋಡಿದಾಗ ಶ್ರೀಗಳವರು ಕೊಟ್ಟಿದ್ದ ಬೆಳ್ಳಿ ತಂಬಿಗೆ, ಧೋತ್ರ ಇತ್ಯಾದಿಗಳು ಶಿವಲಿಂಗದ ಮುಂದೆ ಇದ್ದುದನ್ನು ನೋಡಿ, ಈ ಸೋಜಿಗವನ್ನು ಶ್ರೀಗಳವರಿಗೆ ಹಾಗೇ ಎಲ್ಲರಿಗೂ ಹೇಳಿದರು. ಶ್ರೀಗಳವರು ರುದ್ರದೇವರೇ ತಮಗೆ ದರ್ಶನವಿತ್ತು ಭೋಜನ ಮಾಡಿದನೆಂದು ಹಾಗೂ ಇನ್ನು ಕೇವಲ ಒಂದು ವರ್ಷ ಆಯಸ್ಸು ಇರುವುದೆಂದು ತಿಳಿಸಲು ಬಂದಿದ್ದನೆಂದು ಹೇಳಿದರು. ಶ್ರೀಗಳವರು ರುದ್ರಾಂಶಸಂಭೂತರೆಂದೇ ಖ್ಯಾತಿ ಇದೆ. ಹೊಳೆಹೊನ್ನೂರಿನಲ್ಲಿ ಶ್ರೀಗಳವರ ಬೃಂದಾವನದ ಬಳಿ ಮೂಲೆಯೊಂದೆಡೆಗೆ ಈಶ್ವರ ಭಾಗೀರಥಿಯರು ಪ್ರತ್ಯಕ್ಷರಾಗಿ ದ್ದಾರೆ. ಬಲಕ್ಕೆ ಒಂದೊಂದೇ ತುಟುಕು ನೀರು, ಒಂದು ಉಸುಬಿನ ಕಣವು ಬೀಳುತ್ತಿದ್ದುದು ಕಾಣಿಸುತ್ತದೆ. ಅಲ್ಲದೇ ಶಿವಲಿಂಗವು ಕೆಲವು ಉದ್ಭವವಾಗಿದೆ. ಒಮ್ಮೆ ತಿರುಪತಿಗೆ ಹೋದಾಗ ಪಾಪನಾಶಿನೀ ತೀರ್ಥಕ್ಕೆ ಗುಡ್ಡದಿಂದ ಮೂರು ಪ್ರವಾಹ

ಹರಿಯುತ್ತಿದ್ದುದು, ಮಳೆಯ ಅಭಾವದಿಂದ ಒಂದೇ ಪ್ರವಾಹ ಹರಿದು ಬರುತ್ತಿತ್ತು. ಇವರು ಈ ತೀರ್ಥವನ್ನು ಸಂದರ್ಶಿಸಲು ಮೂರು ಪ್ರವಾಹದಿಂದ ಮತ್ತೆ ನೀರು ಹರಿಯಲು ಶುರುವಾಯಿತು. ಮತ್ತೊಮ್ಮೆ ರಾಮನಾಥಪುರದಲ್ಲಿರುವ ಉತ್ತರಾದಿ ಮಠದಲ್ಲಿ ಶ್ರೀಗಳವರು ಪಾಠಪ್ರವಚನ ಮಾಡುತ್ತಿರುವಾಗ ಕಾವೇರಿ ನದಿಯ ಒಂದು ಸಣ್ಣ ಪ್ರವಾಹವು ಮಠದ ಮುಂದೆ ಹರಿದು ಮುಖ್ಯವಾಹಿನಿಯನ್ನು ಸೇರಿತಂತೆ. ಹರಿದ್ರಾ ಕುಂಕುಮ ಪೀತಾಂಬರಗಳನ್ನು ಸಮರ್ಪಿಸಿ ಶ್ರೀಗಳವರು ಗಂಗಾದೇವಿಯನ್ನು ಪೂಜಿಸಿ 'ಗಂಗಾಲಹರಿ'ಯನ್ನು ರಚಿಸಿದರಂತೆ. ಶಿಖರಣಿ ವೃತ್ತದಲ್ಲಿರುವ, 'ಗಂಗಾಲಹರಿ'ಯ ಶ್ಲೋಕಗಳು ನಾದಮಾಧುರ್ಯದಿಂದ ಕೂಡಿದ್ದು ಗಂಗಾ ದೇವಿಯು ಹೆಜ್ಜೆಯನ್ನಿಡುತ್ತಾ ಭೂಮಿಗೆ ಇಳಿದು ಬರುವಂತಿದೆ. ಮಹಾನುಭಾವರಾದ ಶ್ರೀ ಸತ್ಯಧರ್ಮರು ಅನುಪ್ರಾಸ, ಅಲಂಕಾರ, ರಸ, ಮಾತಿನ ರುಚಿ ಇವೆಲ್ಲವೂ ಯಾವುದೂ ಇಲ್ಲವೆಂದು ಹೇಳಿದರೂ ಅವೆಲ್ಲವನ್ನೂ ಒಳಗೊಂಡ ಭಕ್ತಿರಸಕಾವ್ಯ ವಾಗಿದೆ. ಜಗನ್ನಾಥಪಂಡಿತನು ಬರೆದ ಗಂಗಾಲಹರಿಯಲ್ಲಿ ಕಾವ್ಯಸೌಂದರ್ಯವಿದ್ದರೆ, ಶ್ರೀ ಸತ್ಯಧರ್ಮರು ಬರೆದಿರುವ ಗಂಗಾಲಹರಿಯಲ್ಲಿ ಭಕ್ತಿಸೌಂದರ್ಯವು ತುಂಬಿ ತುಳುಕುತ್ತಿದೆ. ಶ್ರೀಮದುತ್ತರಾದಿ ಮಠಾಧೀಶರಲ್ಲಿ ಶ್ರೀ ಸತ್ಯಬೋಧರು, ಶ್ರೀ ಸತ್ಯಸಂಧರಂತೆ, ಶ್ರೀ ಸತ್ಯಧರ್ಮರು ಸಹ ಗಂಗಾದೇವಿಯನ್ನು ಸಾಕ್ಷಾತ್ಕರಿಸಿಕೊಂಡ ಯತಿಕುಲಾಗ್ರೇಸರರು. ಶ್ರೀ ಸತ್ಯಧರ್ಮತೀರ್ಥರು ಹನ್ನೊಂದು ಗ್ರಂಥಗಳನ್ನು ಬರೆದಿದ್ದಾರೆ. ಮುಖ್ಯವಾಗಿ (1) ಸಕಲ ವಿದ್ವಜ್ಜನರಿಂದ ಮಾನ್ಯವಾದ ಶ್ರೀ ಭಾಗವತದ 6,7,8,9,10–12ನೇ ಸ್ಕಂದಗಳಿಗೆ ಬರೆದ ಟಿಪ್ಪಣಿ, (2) ಭಾರತ ಸನತ್ಸುಜಾತೀಯ ವ್ಯಾಖ್ಯಾನ, (3) ತತ್ತ್ವಸಂಖ್ಯಾನ ಟಿಪ್ಪಣಿ, (4) ತತ್ತ್ವನಿರ್ಣಯ ಟಿಪ್ಪಣಿ, (5) ವಾಲ್ಮೀಕಿ ರಾಮಾಯಣಕ್ಕೆ ಟಿಪ್ಪಣಿ, (6) ಲಿಂಗಭಂಗ ಪ್ರಕರಣ, (7) ಭಾಷ್ಯದೀಪಿಕಾ ವಾಕ್ಯಾ, (8) ಭಾರತ ವಿರಾಟಪರ್ವ ವ್ಯಾಖ್ಯಾನ.

ಶ್ರೀ ಬಿ.ಎನ್.ಕೆ. ಶರ್ಮಾರವರು ತಮ್ಮ "History of the Dvaita School of Vedanta", page 512ರಲ್ಲಿ

"Some ten works have been attributed to Sri Satyadharma.......... His most outstanding work, however, in his useful partial commentary on the Valmiki Ramayana (Kandas ii-vi).. As the Valmiki Ramayana has received practically little cannonical recognition at the hands of Madhva or his

commentators, who look to other versions like the Mula Ramayana for inspiration and support, this commentary on Valmiki works assumes special significance. The Doctrinal aspect is not lost sight of by Sathyadharma in his commentary".

ಮಾಧ್ವ ಸಂಪ್ರದಾಯ ಟಿಪ್ಪಣಿಗಳು ರಾಮಾಯಣಕ್ಕೆ ವಿರಳ. ಇವರ ಟಿಪ್ಪಣಿಯು ಅಪೂರ್ವವಾಗಿದೆ (Special Significance). ಅಭಿನವ ರಘೂತ್ತಮತೀರ್ಥರೆಂದೇ ಪ್ರಖ್ಯಾತರಾಗಿರುವ ಹಾಲಿ ಪೀಠಸ್ಥರಾದ ಶ್ರೀ ಸತ್ಯಾತ್ಮರು, ಮಹಾಮಹಿಮರಾದ ಶ್ರೀ ಸತ್ಯಧರ್ಮರು ಬರೆದಿರುವ ವಾಲ್ಮೀಕಿ ರಾಮಾಯಣ– ಸುಂದರಕಾಂಡ ಟಿಪ್ಪಣಿಯ ಈ ಶ್ಲೋಕಕ್ಕೆ

"ಆರಾಮಧಾಮ ಶ್ರೀರಾಮರಾಮಾಂ ದ್ರಷ್ಟುಂ ಗತೋಽಂಬುಧೇಃ ।
ಪಾರಂ ಸಪಾರಯೇದೇತತ್ಕಾಂಡಕಾಂಡನಿಧಿಂ ಮಯಾ" ॥

ಬೆಂಗಳೂರಿನಲ್ಲಿ ಶ್ರೀ ರಘೋತ್ತಮ ಹಾಗೂ ಶ್ರೀ ಜಯತೀರ್ಥರ ವೃಂದಾವನ ಗಳ ಮುಂದೆ ಸುಮಾರು ಎರಡು ತಾಸುಗಳಷ್ಟು ಕಾಲ ವ್ಯಾಖ್ಯಾನ ಮಾಡಿ ನೆರೆದಿದ್ದ ಪಂಡಿತರನ್ನು ನಿಬ್ಬೆರಗೊಳಿಸಿದರು. ಭಕ್ತಾದಿಗಳು ವ್ಯಾಖ್ಯಾನವಾದ ಮೇಲೆ ಎರಡು ನಿಮಿಷ ನಿಲ್ಲದ ಕರತಾಡನ ಮಾಡಿ ಧನ್ಯತಾಭಾವವನ್ನು ವ್ಯಕ್ತಪಡಿಸಿದರು. ಎಂಥಹ ಮಹಿಮರಿವರು. ಶ್ರೀ ಸತ್ಯಧರ್ಮರು ತಮ್ಮ ಸುದೀರ್ಘ 33 ವರ್ಷಗಳ ಪೀಠಾಧಿ ಪತ್ಯದಲ್ಲಿ ಮಠದ ಕೀರ್ತಿಪತಾಕೆಗಳನ್ನು ದಿಗ್ ದಿಗಂತಕ್ಕೆ ಹಾರಿಸಿ ಆರ್ಥಿಕವಾಗಿ ಮಠವನ್ನು ಸದೃಢಗೊಳಿಸಿ ಸುಸ್ಥಿತಿಗೆ ತಂದು ರಾಜಮಹಾರಾಜರಿಂದ, ಪಂಡಿತ ಪಾಮರರಿಂದ ವಂದಿತರಾದ ಯತಿಶ್ರೇಷ್ಠರು. ಅಲ್ಲದೇ ಸಾಕ್ಷಾತ್ತಾಗಿ ನರಸಿಂಹ ದೇವರನ್ನು ಪ್ರತ್ಯಕ್ಷಿಸಿಕೊಂಡವರು. ಹೊಳೆನರಸೀಪುರದಲ್ಲಿರುವಾಗ ತಮ್ಮ ಮಠದಿಂದ ಕ್ಷೇತ್ರದೊಡೆಯನಾದ ಶ್ರೀ ಲಕ್ಷ್ಮೀನರಸಿಂಹ ದೇವರ ಗುಡಿಗೆ ಗಂಧವನ್ನು ಕಳುಹಿಸುತ್ತಿದ್ದರು. ಅಲ್ಲದೇ ಪ್ರತಿದಿನವು ಸಾಯಂಕಾಲ ದೇವಸ್ಥಾನಕ್ಕೆ ಹೋಗಿ ದೇವರನ್ನು ದರ್ಶನ ಮಾಡಿ, ಗಂಧಪ್ರಸಾದವನ್ನು ಪಡೆಯುತ್ತಿದ್ದರು. ಒಮ್ಮೆ ದೇವಸ್ಥಾನಕ್ಕೆ ಶ್ರೀಗಳವರು ಹೋಗಲು ಸ್ವಲ್ಪ ನಿಧಾನವಾಗಲು, ಅರ್ಚಕರು ಇಂದು ಸ್ವಾಮಿಗಳು ಬರುವುದಿಲ್ಲ ವೆಂದು ಬಗೆದು, ಬಾಗಿಲನ್ನು ಹಾಕಿಕೊಂಡು ಹೊರಟು ಹೋದರು. ಎಂದಿನಂತೆ ಸ್ವಾಮಿಗಳು ಬಂದು ಹೋಗಿದ್ದು ತಿಳಿದು ಅರ್ಚಕರು ಶ್ರೀಗಳಲ್ಲಿ ಬಂದು ತಮ್ಮ ತಪ್ಪನ್ನು ಮನ್ನಿಸಬೇಕೆಂದು ಪರಿಪರಿ ಬೇಡಿದರು. ಇದನ್ನು ನೋಡಿ ಸ್ವಾಮಿಗಳು, ಅರ್ಚಕರೆ, ತಾವು ಇದೇನು ಹೇಳುವಿರಿ? ನೀವೇ ಸ್ವತಃ ಗಂಧಪ್ರಸಾದವನ್ನು ನೀಡಿರುವಿರಿ. ಅಲ್ಲದೇ ನಾವು ಸ್ವಾಮಿಯಾದ ಪ್ರಹ್ಲಾದವರದ ನನ್ನು ದರ್ಶನ ಮಾಡಿ

ಬಂದೆವಲ್ಲ ಎಂದು ಹೇಳಿದುದಲ್ಲದೇ, ಸ್ವಾಮಿಗೆ ನೀವು ಮಾಡಿದ ಅಲಂಕಾರ ಬಹಳ ಚೆನ್ನಾಗಿತ್ತು ಎಂದರು. ಅರ್ಚಕರು, ಸಾಷ್ಟಾಂಗ ನಮಸ್ಕಾರ ಹಾಕಿ ಅಂಜಲಿಬದ್ಧರಾಗಿ ಮಹಾಸ್ವಾಮಿ, ಆ ದೇವದೇವೋತ್ತಮನಾದ ಹಿರಣ್ಯಕಶಿಪು ಸಂಹಾರ ಪ್ರಹ್ಲಾದವರದ ನಿಂದಲೇ ಗಂಧಪ್ರಸಾದವನ್ನು ಸ್ವೀಕರಿಸಿದ ಯತಿಕುಲೋತ್ತಮರೆಂದು ಪದೇ ಪದೇ ವಂದಿಸಿದರು. ಇವರ ಪರಮಗುರುಗಳಾದ **ಶ್ರೀ ಸತ್ಯಸಂಧರು ವಿಠಲನಿಗೆ ಮುದ್ರಾಪ್ರದಾನ ಮಾಡಿದರೆ, ಇವರಾದರೋ ನರಸಿಂಹನಿಂದಲೇ ಗಂಧಪ್ರಸಾದ ವನ್ನು ಪಡೆದವರು.** ಶ್ರೀ ಸತ್ಯಸಂಧರ ಆಶ್ರಮಪೂರ್ವದ ಮೊಮ್ಮಕ್ಕಳಾದ **ಶ್ರೀ ಸತ್ಯಪರಾಯಣರು** ಲಾತೂರಿನಲ್ಲಿ **ಶ್ರೀ ಮುಖ್ಯಪ್ರಾಣನನ್ನು** ಸಾಕ್ಷಾತ್ಕರಿಸಿಕೊಂಡವರು. ಶ್ರೀಮದುತ್ತರಾದಿ ಮಠದ ಯತಿವರೇಣ್ಯರ ಮಹಿಮೆಯೇ ಅಂಥಹದು.

ಶ್ರೀ ಸತ್ಯಧರ್ಮರ ಕೈಬರಹವು ಬಹಳ ಸುಂದರವಾಗಿ ಸ್ಫುಟವಾಗಿತ್ತು. ಅವರ ಕೈಯಿಂದಲೇ ಬರೆದು, ಅಂಚಿನಲ್ಲಿ ಬಣ್ಣದ ಹೂವು, ಚಿತ್ರಗಳಿಂದ ಅಲಂಕರಿಸಿಕೊಂಡ ಸರ್ವಮೂಲ ಗ್ರಂಥವು ಇದಕ್ಕೆ ಸಾಕ್ಷಿ. ಶ್ರೀಮದುತ್ತರಾದಿ ಮಠದಲ್ಲಿ ಈಗಲೂ ಇದು ಪೂಜಿತವಾಗುತ್ತಲಿದೆ. ಶ್ರೀಗಳವರ ಗ್ರಂಥಗಳು ಪ್ರೌಢಿಮೆಗೆ ಎಷ್ಟು ಮಹತ್ವವೋ ಸುಂದರವಾದ ಬರವಣಿಗೆ ಅಷ್ಟೇ ಹೆಸರುವಾಸಿಯಾಗಿದೆ. ಇವರ ಗ್ರಂಥಗಳು ದ್ವೈತ ಸಿದ್ಧಾಂತಕ್ಕೆ ದೊಡ್ಡ ಕೊಡುಗೆಯಾಗಿದೆ. ಅಲ್ಲದೇ ಹೊನ್ನಿನ ಕಳಶವಾಗಿದೆ. ಅವರ ಬೃಂದಾವನವು ಹೊಳೆಹೊನ್ನೂರಿನಲ್ಲಿದೆ. ಪುರಂದರದಾಸರು ತಮ್ಮ ದೇವರನಾಮ ಗಳಲ್ಲಿ 'ಹೊನ್ನೂರಪುರವಾಸ'ವೆಂದು, 'ಹೊನ್ನ ಹೊಳೆ'ಯಲ್ಲಿ ಮಿಂದು ಹೊಳೆ ಹೊನ್ನೂರನ್ನು ಹೆಸರಿಸಿದ್ದಾರೆ. **''ಪುರಂದರಸಾಹಿತ್ಯ ದರ್ಶನ''** – ಪುಟ 1ರಲ್ಲಿ ಶ್ರೀಕ್ಷೇತ್ರದರ್ಶನದಡಿಯಲ್ಲಿ **''ಹೊನ್ನೂರಪುರ – ಹೊನ್ನ ಹೊಳೆ''**ಯ ತಲೆಬರಹದಲ್ಲಿ **ಹೊಳೆಹೊನ್ನೂರನ್ನು** ಈ ರೀತಿ ವಿವರಿಸಿದೆ–

''ದಾಸರ ಪದವೊಂದರಲ್ಲಿ **''ಹೊನ್ನೂರಪುರವಾಸ''**ನೆಂದೂ, ಇನ್ನೊಂದರಲ್ಲಿ **''ಹೊನ್ನ ಹೊಳೆಯಲ್ಲಿ''** ಎಂದೂ ಒಕ್ಕಣೆಗಳಿವೆ. ಇವು ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ನದಿಯ ಬಲದಂಡೆಯ ಮೇಲಿರುವ ಹೊಳೆಹೊನ್ನೂರೆಂಬ ಹಳ್ಳಿಯನ್ನು ಸೂಚಿಸುತ್ತದೆ. ಶಿವಮೊಗ್ಗೆಯಿಂದ ಈಶಾನ್ಯ ದಿಕ್ಕಿನಲ್ಲಿ ಒಂಭತ್ತು ಮೈಲಿ ದೂರವಿರುವ ಇಲ್ಲಿ .... ಮೊದಲಿಗೆ ಬಂಗಾರವನ್ನು ಅಗೆದು ತೆಗೆಯುವ ಉದ್ಯಮ ಇದ್ದುದು .... ಹೊನ್ನೂರುಪುರ ಎಂಬ ಹೆಸರು ಗಳಿಕೆಗೆ ಕಾರಣವಾಯಿತು. ಚಾಳುಕ್ಯದ ಸಾಮಂತರಾಗಿ ಆಳುತ್ತಿದ್ದ ಸಿಂದರ ಸಿಂದವಾಡಿ ಪ್ರಾಂತ್ಯಕ್ಕೆ ಸೇರಿದ್ದು ಮುಂದೆ ಬನವಾಸಿ, ಹೊಯ್ಸಳ, ಕಳೆಚೂರ್ಯ, ದೇವಗಿರಿ, ಯಾದವ ಮತ್ತು ವಿಜಯನಗರ ಗಳ ಸೀಮೆಯೊಳಗೆ ಸೇರಿದ್ದು ಹದಿನಾರನೆಯ ಶತಮಾನದಲ್ಲಿ ಮೂಗಿ ದೊರೆ ಮಾರನಾಯಕನ ವಶವಾಯಿತು. ಹೊಳೆಹೊನ್ನೂರಿನ ಜಾತ್ರೆ ಹೆಸರಾಗಿದ್ದಿತು''.

ಶ್ರೀ ಸತ್ಯಧರ್ಮರ ಬೃಂದಾವನವು ಬಹಳ ಚೆನ್ನಾಗಿದ್ದು, ಶ್ರದ್ಧಾಭಕ್ತಿಯಿಂದ ನೋಡಿ ಸೇವಿಸುವವರಿಗೆ ಭಕ್ತಿಯನ್ನುಂಟು ಮಾಡುತ್ತದೆ. ಇವರ ಸೇವೆಯನ್ನು ಮಾಡುವವರಿಗೆ ಸಕಲ ಸನ್ಮಂಗಳಗಳನ್ನು ಉಂಟುಮಾಡುತ್ತದೆ.

ಮಠವು ಭದ್ರಾನದಿಯ ದಂಡೆಯ ಮೇಲಿದೆ. ಇಲ್ಲಿರುವ ಸತ್ಯಧರ್ಮರ ವಂಶಸ್ಥರಾದ ಶ್ರೀ ಸುಬ್ಬಣ್ಣಾಚಾರ್ಯರು ಬಹಳ ಶ್ರದ್ಧೆಯಿಂದ, ಗುರುಗಳ ಪೂಜೆಯನ್ನು ಮಾಡಿ ಭಕ್ತರ ಅಭೀಷ್ಟವನ್ನು ಗುರುಗಳಿಂದ ದೊರಕುವುದರಲ್ಲಿ ನೆರವು ನೀಡುತ್ತಾರೆಂದು ಹೇಳಿದರೆ ಹೆಚ್ಚೇನಲ್ಲ. ಮಠವು ಬಹಳ ದೊಡ್ಡದಾಗಿದೆ. ಗರ್ಭಾಲಯದಲ್ಲಿ ಶ್ರೀಗಳ ವೃಂದಾವನವಿದೆ. ವೃಂದಾವನದ ಪಕ್ಕದಲ್ಲಿ ಉದ್ಭವ ವಾಗಿರುವ ಲಿಂಗಗಳಿವೆ. ಇಲ್ಲಿ ಗಂಗೆಯು ಒಸರುತ್ತಿತ್ತಂತೆ. ರುದ್ರಾಂಶಸಂಭೂತರಾದ (ಸತ್ಕಥಾ ಪುಟ) ಶ್ರೀಗಳವರು ಗಂಗಾದೇವಿಯನ್ನು ಪ್ರತ್ಯಕ್ಷಿಸಿಕೊಂಡವರು, ಶ್ರೀಮೂಲರಾಮರನ್ನು ಇವರ ಗುರುಗಳ (ಶ್ರೀ ಸತ್ಯವರರು) ಕಾಲದಲ್ಲಿ ಹುಡುಕಿ ಕೊಟ್ಟವರು, ಶ್ರೀ ಲಕ್ಷ್ಮೀನರಸಿಂಹ ದೇವರಿಂದ ಸಾಕ್ಷಾತ್ತಾಗಿ ಗಂಧಪ್ರಸಾದವನ್ನು ಪಡೆದವರು. ಅಲ್ಲದೇ ಬ್ರಾಹ್ಮಣರೂಪದಲ್ಲಿ ಬಂದ ರುದ್ರದೇವರಿಗೆ ಭೋಜನ ಮಾಡಿಸಿ ಬೆಳ್ಳಿ ತಂಬಿಗೆ, ಪಂಚಪಾತ್ರೆ, ಧೋತ್ರಗಳನ್ನಿತ್ತು ಸನ್ಮಾನಿಸಿದವರು. ಇಂತಹ ಮಹಿಮಾನ್ವಿತ ಗುರುಗಳ ಸ್ಮರಣೆ ಮಾಡುವುದರಿಂದ ಸಕಲ ದೋಷ ನಿವಾರಣೆ ಯಾಗುವುದು. ಸಕಲ ಸನ್ಮಂಗಳವಾಗುವುದು. ಇವರ ಆಗ್ರಹಕ್ಕೆ ಗುರಿಯಾಗಿ ಬಹಳಷ್ಟು ಕಷ್ಟವನ್ನನುಭವಿಸಿರುವರು.

ಇವರ ಕಾಲದಲ್ಲಿ ಹೊಳೆಹೊನ್ನೂರಲ್ಲಿ ಶ್ರೀರಾಮಧ್ಯಾನಿ ಕೃಷ್ಣಾರಾಯರ ವಂಶಸ್ಥರು ಉತ್ಸವಾರಾಧನೆ ಕಾಲಗಳಲ್ಲಿ ರಾಮಧ್ಯಾನ ಮಾಡುತ್ತ ದೀವಟಿಗೆ ಸೇವೆ ಮಾಡುತ್ತಿದ್ದರಂತೆ. ಆದ್ದರಿಂದ, ರಾಮಧ್ಯಾನಿಗಳೆಂದು ಹೆಸರಾಯಿತಂತೆ. ರಾಮಧ್ಯಾನಿ ವಂಶಸ್ಥರ ಸೇವೆಗೆ ಮೆಚ್ಚಿ ಶ್ರೀ ಸತ್ಯಧರ್ಮರು ಅವರ ಪಾದುಕೆಯನ್ನಿತ್ತಿದ್ದರಂತೆ. ಆ ಪಾದುಕೆಗಳು ಇವತ್ತಿಗೂ ರಾಮಧ್ಯಾನಿ ವಂಶಸ್ಥರಲ್ಲಿದೆ. ಬೆಂಗಳೂರು ಸುಂಕೇನಹಳ್ಳಿ ಯಲ್ಲಿ (ಹನುಮಂತನಗರ) ವಾಸವಾಗಿರುವ ರಾಮಧ್ಯಾನಿ ಶ್ರೀನಿವಾಸರಾಯರ ಮನೆಯಲ್ಲಿ ಕೆಲವು ದಿನಗಳು ಶ್ರೀ ಸತ್ಯಧರ್ಮರ ಪಾದುಕೆಗಳಿದ್ದು, ಈಗ ಅವರ ಅಣ್ಣ ಶ್ರೀ ಗುಂಡುರಾಯರ ಮನೆಯಲ್ಲಿ (ಮೈಸೂರಿನಲ್ಲಿ) ಪೂಜೆಗೊಳ್ಳುತ್ತಿದೆ.

'ಶ್ರೀ ಸತ್ಯಧರ್ಮ' 'ಶ್ರೀ ಸತ್ಯಧರ್ಮ' ಎಂದು ಶ್ರದ್ಧಾಭಕ್ತಿಯಿಂದ ನಾಮೋಚ್ಚಾರಣೆಯಿಂದಲೆ ಸಕಲ ದುರಿತ ನಿವಾರಣೆಯಾಗುವುದು, ಭೂತಪ್ರೇತ ಪಿಶಾಚಾದಿಗಳೋಚ್ಚಾಟನೆಯಾಗುವುದು, ಸರ್ವಮಂಗಳ ಉಂಟಾಗುವುದು. ಇವರ ಬೃಂದಾವನವನ್ನು ಸೇವಿಸಿ ಸಕಲಾಭೀಷ್ಟವನ್ನು ಪಡೆದು ಧನ್ಯರಾಗೋಣ.

ಶ್ರೀ ಶ್ರೀ ಸತ್ಯಧರ್ಮತೀರ್ಥರಿಂದ ರಚಿತವೆನ್ನಲಾದ ದೇವರನಾಮ

ಬಾರಯ್ಯ ದಯಮಾಡಿ ।
ನೀ ತ್ವರಿತದಿ ಬಾ ಬಾ ದಯಮಾಡಿ ॥ಪ॥

ಬಾರಯ್ಯ ದಯಮಾಡಿ । ವಾರಿಜರಿಪ್ರಕುಲ
ಕಾರಣವಾಲಸ್ಯ ತೋರದು ಏನಿದು ॥1॥

ಕಂಬದಿ ನರಹರಿ ಎಂಭೋ ರೂಪದಿ ಬಂದೆ ।
ತುಂಬಿದೆ ಸತ್ಕುಲ ಸ್ಥಂಬ, ನೀ ರಥವೇರಿ ॥2॥

ನರನು ಅರ್ಚಕನೆತ್ತ, ನರಹರಿ ನೀನೆತ್ತ।
ಕರುಣದಿ ಬರಬೇಕೋ ಗುರು ಹಯವದನಾ ॥3॥

ಬಾರಯ್ಯ ದಯಮಾಡಿ ।
ನೀ ತ್ವರಿತದಿ ಬಾ ಬಾ ದಯಮಾಡಿ ॥

॥ ಶ್ರೀ ಸತ್ಯಧರ್ಮ ಗುರುರಾಜಾರ್ಪಣಮಸ್ತು ॥

ಶ್ರೀ ರಾಮದೇವರು